# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 45 Issue: 45 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 11.08.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here
reach more readers

No. 1

Why Choose Us?
- Experienced Professionals
- Fast and Reliable Service
- Customized Solutions
- Competitive Pricing

E-mail: hampitimes@gmail.com
www.hampitimes.com
epaper.hampitimes.com
9448633038


## ಶ್ರಾವಣ ವಿಶೇಷ

ಪುಣ್ಯ ಪ್ರಾಪ್ತಿಗಾಗಿ **ಹಂಪಿ ಪಂಚಲಿಂಗ** ಪ್ರದಕ್ಷಿಣೆ

ಪುಟ 2

ಲೇಖಕರು : ಎಂ.ಎಂ.ಶಿವಪ್ರಕಾಶ

## ಯಾರು ಶ್ರೇಷ್ಠರು?

ಪುಟ 3

ಲೇಖಕರು : ಶಿವಕುಮಾರ ಸೋಗಿ


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ವಚನಗಳು ನಮ್ಮ ಬದುಕಿಗೆ ಪ್ರೇರಣೆ

## ಹಂಪಾಪಟ್ಟಣ ಗ್ರಾಮದಲ್ಲಿ ಶರಣ ಬಂಧು ಬಳಗದಿಂದ ಬಸವ ಪಂಚಮಿ ಆಚರಣೆ

## ಮಕ್ಕಳಿಗೆ, ರೋಗಿಗಳಿಗೆ ಹಾಲು ವಿತರಣೆ | ಹಾಲು ಕುಡಿದ ಮಕ್ಕಳಿಂದ ಆನಂದ ವ್ಯಕ್ತ



■ **ಹಂಪಿ ಟೈಮ್ಸ್ ಹಂಪಾಪಟ್ಟಣ**

ಬಸವಾದಿ ಶಿವಶರಣರ ವಚನಗಳು ನಮ್ಮ ಬದುಕಿಗೆ ಪ್ರೇರಣೆಯಾಗಿವೆ. ಬಸವೇಶ್ವರರ ತ್ಯಾಗ ಅವರ ಅಮೋಘ ಸಾಧನೆಯ ಅದ್ವಿತೀಯ ವಚನಗಳನ್ನು ಜೀವನದಲ್ಲಿ ಅಧ್ಯಯನ ಮಾಡಿ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ವಿದ್ಯಾ ಗುರುಗಳನ್ನು ರೈತರನ್ನು ಸೈನಿಕರನ್ನು ಹಾಗೆಯೇ ಬುದ್ಧ ಬಸವ ಅಂಬೇಡ್ಕರ್ ಜ್ಞಾನದ ಮಾರ್ಗದರ್ಶಕರಾಗಿದ್ದಾರೆ. ಉತ್ತಮ ಬದುಕಿಗೆ ಮಾರ್ಗ ತೋರಿದವರನ್ನು ಸಾಕ್ಷಾತ ದೇವರು ಎಂದು ಭಾವಿಸಬೇಕು ಎಂದು ಶರಣ ಬಂದು ಬಳಗದ ಸಂಸ್ಥಾಪಕ ನಾಗರಾಜ್ ಘಂಟಿ ಅಭಿಪ್ರಾಯಪಟ್ಟರು.

ಹ.ಬೊ.ಹಳ್ಳಿ ತಾಲೂಕಿನ ಹಂಪಾಪಟ್ಟಣ ಗ್ರಾಮದಲ್ಲಿ ಶರಣ ಬಂದು ಬಳಗದ ವತಿಯಿಂದ ವಿಶ್ವಗುರು ಜಗಜ್ಯೋತಿ ಬಸವೇಶ್ವರರ ಲಿಂಗೈಕ್ಯ ಸಂಸ್ಮರಣೆ ಪ್ರಯುಕ್ತ ಬಸವ ಪಂಚಮಿಯ ಆಚರಣೆಯ ಸಂದರ್ಭದಲ್ಲಿ ಮಕ್ಕಳಿಗೆ ಹಾಲುಣಿಸಿ ಮಾತನಾಡಿದರು. ವಿಶ್ವಗುರು ಬಸವೇಶ್ವರರು ದಲಿತೋ ಧಾರಕರು.. ಸ್ತ್ರೀ ಕುಲದ ಉದ್ಧಾರಕರು ವಿಶ್ವದ ಉನ್ನತ ಮಾರ್ಗದರ್ಶಕರು ಮಾತೃ ಹೃದಯ ಸಂಪನ್ನರು ಬಸವೇಶ್ವರರು 12ನೇ ಶತಮಾನದಲ್ಲಿ ದ್ವಂದ್ವ ನಿಲುವುಗಳನ್ನು ಖಂಡಿಸಿದರು. ಮೌಢ್ಯದ ಪರಮಾವಧಿ ಅಂದಾಚರಣೆ ಖಂಡಿಸಿ ಜನಮಾನ್ಯರಿಗೆ ನಿಜ ನಿಲುವುಗಳನ್ನು ಸರಳ ಭಾಷೆಗಳ ತಿಳಿ ಪಡಿಸಿದರು.

ಬಸವೇಶ್ವರರು ಅನುಭವ ಮಂಟಪದಲ್ಲಿ ಎಲ್ಲಾ ವರ್ಗದ ಜನರಿಗೆ ಅವಕಾಶ ನೀಡಿ ಸಮಾನತೆಯನ್ನು ಪ್ರತಿಪಾದಿಸಿದರು.. ದೇವರ ಪೂಜೆ ಗಿಂತ ಕಾಯಕವೇ ಮುಖ್ಯ ಎಂದು ಸಾರಿದರು ಕಾಯಕದಲ್ಲಿ ಕೈಲಾಸ ಕಾಣಬೇಕೆಂದು, ಕರ್ತವ್ಯದಲ್ಲಿ ನಿಷ್ಠೆ ಪರಸ್ಪರ ಗೌರವ ಪ್ರೀತಿ ಸರ್ವರು ಒಂದೇ ಎಂಬ ಮನೋಭಾವವನ್ನು ಉತ್ತಮ ಅದಮ ಮೇಲು ಕೀಳು ಅನಿಷ್ಠ ಕನಿಷ್ಠ ಇಂತಹ ಮನೋಭಾವನೆಯನ್ನು ಹೋಗಲಾಡಿಸಿ ಸರ್ವರಲ್ಲಿ ಆತ್ಮ ಗೌರವ ಕಾಯಕ ಪ್ರಜ್ಞೆ ದಾಸೋಹ ಪ್ರಜ್ಞೆಯನ್ನು 12ನೇ ಶತಮಾನದ ಜನಮಾನಸದಲ್ಲಿ ಬಿತ್ತಿದವರು ವಿಶ್ವಗುರು ಬಸವೇಶ್ವರರು. ಮೌಢ್ಯವನ್ನು ಆಚರಣೆಗಳನ್ನು ತ್ಯಜಿಸಿ ನಿಜದ ಅರಿವನ್ನು ತಿಳಿದುಕೊಂಡು ಒಳ್ಳೆಯ ಆಚರಣೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಬಸವೇಶ್ವರರು ಶ್ರಾವಣ ಮಾಸದ ಶುದ್ಧ ಪಂಚಮಿ ಎಂದು ಲಿಂಗೈಕ್ಯರಾದರು ಬಸವೇಶ್ವರರ ವೈಚಾರಿಕ ಪ್ರಜ್ಞೆಯ ಪ್ರೇರಣೆಯ ಫಲವಾಗಿ ಮಕ್ಕಳಿಗೆ ಹಾಲನ್ನು ಕುಡಿಸುವುದರ ಮೂಲಕ ಬಸವ ಪಂಚಮಿಯನ್ನು ಆಚರಿಸಿದರು. ಹಾಲು ಕುಡಿದ ಮಕ್ಕಳು ಆನಂದ ಭಾವದಿಂದ ಖುಷಿ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬಳಗದ ಸದಸ್ಯರಾದ ಲಕ್ಕಣ್ಣ ರಾಜಕುಮಾರ್ ಕಿನ್ನೂರಿ, ಶಿವಕುಮಾರ್ ಗಂಟಿ, ಸಿದ್ದಣ್ಣ ಗೌಡರ್, ಜ್ಞಾನೇಶ್, ಗಿರೀಶ್ ಮಧು, ಅಜಯ್ ಸೇರಿದಂತೆ ಹಲವಾರು ಚಿನ್ನರು ಭಾಗವಹಿಸಿ ಬಸವ ಪಂಚಮಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಿದರು.

## ರೋಗಿಗಳಿಗೆ ಹಾಲು ವಿತರಣೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದಲ್ಲಿನ ಮಾನವ ಬಂಧುತ್ವ ವೇದಿಕೆ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ, ಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು ವಿತರಣೆ ಮಾಡುವ ಮೂಲಕ ಬಸವ ಪಂಚಮಿ ಆಚರಿಸಿದರು.

ಪಂಚಮಿ ಆಚರಣೆಯೊಂದಿಗೆ ಹಬ್ಬದಲ್ಲಿ ಲಕ್ಷಾಂತರ ಲೀಟರ್ ಹಾಲನ್ನು ಮಣ್ಣಿನ ಹುತ್ತಗಳಿಗೊ, ಕಲ್ಲುಗಳಿಗೆ ಸುರಿದು ವ್ಯರ್ಥ ಮಾಡುವುದು ನೋವಿನ ಸಂಗತಿಯಾಗಿದೆ. ಆಸ್ಪತ್ರೆಯಲ್ಲಿ ದಾಖಲಾದವರಿಗೆ ಹಾಲು ವಿತರಿಸಲಾಯಿತು, ಇದಕ್ಕೂ ಮುನ್ನ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಮೂರ್ತಿಗೆ ಮಾಲಾರ್ಪಣೆ ಮಾಡಿದರು. ಸ್ತ್ರೀರೋಗ ತಜ್ಞರಾದ ಲಕ್ಷ್ಮಿದೇವಿ ಮತ್ತು ಸಿಬ್ಬಂದಿ ಬಾಬುಲಾಲ್, ಪರಿಸರ ಪ್ರೇಮಿ ಗಣೇಶರಾವ್ ಹವಾಲ್ದಾರ್, ಪರಿವರ್ತನಾ ಚಾರಿಟಬಲ್ ಟ್ರಸ್ಟ್‌ನ ಜಿ.ಸರೋಜ, ಮುಖಂಡರಾದ ವೀರಣ್ಣ ಕಲ್ಮನಿ, ಕೊಟಗಿ ಮಲ್ಲಿಕಾರ್ಜುನ ಮಾತನಾಡಿದರು. ಹಿರಿಯ ಸಾಹಿತಿಗಳಾದ ಎ.ಆರ್.ಪಂಪಣ್ಣ, ಕ.ಸಾ.ಪ.ತಾಲೂಕು ಅಧ್ಯಕ್ಷ ಗೂಳಪ್ಪ ಹುಲಮನಿ, ನಿವೃತ್ತ ಶಿಕ್ಷಕರಾದ ವಿ.ಬಿ.ಮಲ್ಲೇಶಪ್ಪ, ಬರಮಲಿಂಗಪ್ಪ, ಪಿ.ಅನಂತ, ಜಯಸೂರ್ಯ, ಶಂಷಾದ್‌ಬೇಗಂ, ಎಸ್.ಹುಲಿಗೆಮ್ಮ, ಅಂಬಿಕ, ಅನ್ವರ್‌ಬಾಷ, ಕೆ.ಗಂಗಾಧರ, ಯು.ಬಸವರಾಜ, ಮಂಜುನಾಥ ಗಂಡಿ, ಹತ್ತಿ ಪ್ರಶಾಂತ, ಹುಳ್ಳಿ ಪ್ರಕಾಶ, ಒ.ತಿಂದಪ್ಪ, ಸಂತೋಷ ಕುಮಾರ, ಎಚ್.ಉಸ್ಮಾನ್‌ಬಾಷ ಮತ್ತಿತರರು ಇದ್ದರು.


S.M.Traders & Services

Atlas Copco

Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications



- SMALL COMPRESSORS
- MEDIUM COMPRESSORS
- LARGE COMPRESSORS
- ELECTRIC COMPRESSORS
- HOSEPIPE
- HAND-HELD TOOLS(JACKHAMMERS)
- DUST COLLECTORS
- DE-WATERING PUMPS
- SERVICE KIT & SPARE PARTS
- TAPER/IDS DRILL RODS

10% BETTER EFFICIENCY | EASY TO OPERATE | LOW SERVICE COST
LIGHTER | 0 TO 50° C | SERVICE EFFICIENCY
EXTENDED SERVICE INTERVALS | HEAVY DUTY AIR FILTER | HIGH RESELL VALUE

Grow Your Business With Us

9686663125 - 9686663132 - 9686413132

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

ಹಂಪಿ ಟೈಮ್ಸ್
ಸಂ|ಪಾ|ದ|ಕೀ|ಯ

## ಅತೀ ವೇಗ.. ಭವಿಷ್ಯಕ್ಕೆ ರೋಗ

ಸುಮಾರು ಇಪ್ಪತ್ತೈದು ವಯಸ್ಸಿನ ಹುಡುಗ ಅವನು. ಮನೆಯಲ್ಲಿ ಹಾಸಿಗೆ ಹಿಡಿದಿದ್ದಾನೆ. ಮೇಲೇಳಲೂ ಆತನಿಗೆ ಸಾಧ್ಯವಾಗುತ್ತಿಲ್ಲ. ಹೀಗೆ ಮಲಗಿಯೇ ಎರಡ್ಮೂರು ವರ್ಷಗಳಾದವು. ಆತನ ಎಲ್ಲ ದೈನಂದಿನ ಕ್ರಿಯಾಕರ್ಮಗಳನ್ನು ಆತನ ತಾಯಿ ಮತ್ತು ತಂದೆ ನೋಡಿಕೊಳ್ಳುತ್ತಿದ್ದಾರೆ. ಇರುವ ಒಬ್ಬನೇ ಒಬ್ಬ ಮಗ ಅವನು. ಹಾಸಿಗೆ ಹಿಡಿದಿರುವ ಆತನ ನೋಡಿಕೊಳ್ಳಲು, ಆತನ ವೈದ್ಯಕೀಯ ಚಿಕಿತ್ಸಾ ವೆಚ್ಚಗಳನ್ನು ಸರಿತೂಗಿಸಲು ಆತನ ತಂದೆ ಇನ್ನಿಲ್ಲದ



ಕಷ್ಟ ಪಡುತ್ತಿದ್ದಾನೆ. ತಾಯಿ ಕಣ್ಣೀರಿಗೆ ಕೊನೆಯೇ ಇಲ್ಲ. ಮಗನ ಮುಖ ನೋಡಿದೊಡನೆ ಆತನ ಸ್ಥಿತಿ ಕಂಡು ತಾಯಿಗೆ ದುಃಖ ಉಮ್ಮಳಿಸುತ್ತದೆ. ತಂದೆ–ತಾಯಿಯನ್ನು ಮನೆಯಲ್ಲಿ ಕೂರಿಸಿ, ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕಾದ ಮನೆಮಗನೇ ಮನೆಯಿಂದ ಹೊರಗಡೆ ಕಾಲಿಡಲೂ ಆಗುತ್ತಿಲ್ಲ. ಹೊರಗಡೆ ದುಡಿದು ಬಂದು ತಂದೆತಾಯಿಯನ್ನು ಆರೈಕೆ ಮಾಡಬೇಕಾದ ಮಗನೇ ಈಗ ತನ್ನ ಪಾಲಕರಿಂದ ಆರೈಕೆಗೆ ಒಳಗಾಗುತ್ತಿದ್ದಾನೆ. ಎರಡು ವರ್ಷಗಳ ಹಿಂದೆ ಈತ ತನ್ನ ಸ್ನೇಹಿತರೊಡನೆ ಬೈಕಿನಲ್ಲಿ ಹೊರಗಡೆ ತೆರಳಿದ್ದ. ಮೊದಲೇ ಬಿಸಿರಕ್ತದ ಮೈ. ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕಾದ ಮನಸ್ಸನ್ನು ಹರಿಬಿಟ್ಟಿದ್ದ. ಸಿನಿಮಾಗಳಿಂದ, ತನ್ನ ನೆಚ್ಚಿನ ಹೀರೋಗಳಿಂದ ಪ್ರಭಾವಿತನಾಗಿದ್ದ. ಆ ಹೀರೋಗಳನ್ನು ನೋಡಿ ತಾನೂ ಅವರಂತೆ ಸೂಪರ್ ಹೀರೋ ಎಂದು ಭಾವಿಸಿಕೊಂಡಿದ್ದ. ಇದೇ ಹುಮ್ಮಸ್ಸಿನಲ್ಲಿ ಜನಜಂಗುಳಿ ನಡುವೆ ಅತಿಯಾಗಿ ಬೈಕಿನಲ್ಲಿ ಅತಿಯಾದ ಸ್ಟಂಟ್ ಮಾಡಲು ಹೋದ. ಆದರೆ, ಆಗಿದ್ದೇ ಬೇರೆ. ಬೈಕ್ ನಿಯಂತ್ರಣ ತಪ್ಪಿ ಅಪಘಾತವಾಗಿದೆ. ಆಗ ಆತನ ಕಾಲು ಮತ್ತು ಕೈ ಸ್ವಾಧೀನ ಕಳೆದುಕೊಂಡವು. ಈತನ ಹುಚ್ಚಾಟಕ್ಕೆ ಕುಟುಂಬವೇ ಬೀದಿಗೆ ಬಂದು ನಿಂತಿತು. ಈ ಕಥೆ ಕೇವಲ ಉದಾಹರಣೆಯಷ್ಟೇ. ಇಂಥ ನೂರಾರು ಕಥೆಗಳು ನಮ್ಮ ನಿಮ್ಮಲ್ಲಿ ನಿತ್ಯವೂ ನಡೆಯುತ್ತಿರುತ್ತಲೇ ಇವೆ. ಆದರೂ, ಯುವಕರು ಇಂಥವನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಆರೋಗ್ಯ ಇರುವವರೆಗೆ ಮತ್ತು ದೈಹಿಕ ಶಕ್ತಿ ಇರುವವರೆಗೆ ಎಲ್ಲವೂ ಸುಂದರವೇ. ಯಾವಾಗ ಯುವಕರು ಪೆಟ್ಟಿಗೆ ಬಿದ್ದರೋ ಆಗ 'ಅಯ್ಯೋ ಹೀಗೆ ಮಾಡಬಾರದಿತ್ತು' ಎಂದುಕೊಳ್ಳುತ್ತಾರೆ. ಆದರೆ, ಅಷ್ಟೊತ್ತಿಗಾಗಲೇ ಕಾಲ ಮಿಂಚಿರುತ್ತದೆ. ಇತ್ತೀಚೆಗಂತೂ ಬೈಕ್ ಸ್ಟಂಟಗಗಳು, ಬೈಕಿನ ಮೇಲೆ ಹೀರೋಯಿಸಂ ತೋರಿಸುವುದು, ತಾನು ಫರ್ಫೆಕ್ಟ್ ಬೈಕ್ ರೈಡರ್ ಎಂದುಕೊಳ್ಳುತ್ತಾನೆ. ಅದನ್ನು ರಸ್ತೆಯಲ್ಲಿ ಪ್ರದರ್ಶನ ಮಾಡುತ್ತಾನೆ. ಟೈಮ್ ಸರಿಯಿದ್ದರೆ ಎಲ್ಲವೂ ಸರಿಯಿರುತ್ತದೆ. ಒಂದು ವೇಳೆ ಸಮಯ ಮಿಂಚಿಹೋದರೆ ಅದರಿಂದಾಗುವ ಭವಿಷ್ಯದ ನಷ್ಟ ಅವನೇ ಅನುಭವಿಸಬೇಕು. ಬೈಕ್‌ಗಳು ಇರುವುದು ಒಂದು ಕಡೆಯಿಂದ ಮತ್ತೊಂದೆಡೆ ಹೋಗುವುದಕ್ಕಷ್ಟೇ. ಅದರ ಮೇಲೆ ಕೂತು ಪ್ರಯೋಗ ಮಾಡುವುದಕ್ಕಲ್ಲ. ಒಂದು ವೇಳೆ ಸ್ಟಂಟ್ ಮಾಡುವುದಿದ್ದರೆ ಕ್ರೀಡೆಗೆ ಹೋಗಲಿ. ಬದಲಿಗೆ ತನ್ನ ಜೀವ ಅಥವಾ ಇನ್ನೊಬ್ಬರ ಜೀವ ತೆಗೆಯುವ ಅಥವಾ ಹಾಳು ಮಾಡುವುದು ಎಷ್ಟರ ಮಟ್ಟಿಗೆ ಸರಿ. ಇದರಲ್ಲಿ ಪಾಲಕರದೂ ಪಾಲಿದೆ. ಅವರು ತಮ್ಮ ಮಕ್ಕಳು ಎಷ್ಟು ಚೆಂದ ಬೈಕ್ ಓಡಿಸುತ್ತಾರೆ ಎಂದು ಸಂತೋಷ ಪಡುವ ಬದಲಿಗೆ, ಅವನ ಕಿವಿ ಹಿಂಡಿ ಬುದ್ಧಿ ಕಲಿಸಬೇಕು.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

**ವಿರೂಪಾಕ್ಷ ದಕ್ಷಿಣ ಭಾರತದ ಶ್ರೇಷ್ಠ ಅಧಿದೈವ. ವಿಶೇಷವಾಗಿ ವಿರೂಪಾಕ್ಷ ಆರಾಧನೆ ಪೂಜೆ ಮಾಡಿದವರಿಗೆ ವಿಶೇಷವಾದ ಪುಣ್ಯ ಪ್ರಾಪ್ತಿಯಾಗುತ್ತದೆ ಎನ್ನುವುದು ಜನರ ನಂಬಿಕೆ. ಹೀಗಾಗಿ ದಕ್ಷಿಣದ ಕಾಶಿ ಎಂದು ಜನರ ಹಂಪಿಗೆ ಬರುತ್ತಿದ್ದಾರೆ. ವಿಶೇಷವಾಗಿ ಶ್ರಾವಣ ಮಾಸದಲ್ಲಿ ವಿರುಪಾಕ್ಷನ ಈ ಗಡಿ ದೈವಗಳನ್ನು ಶ್ರಾವಣ ಮಾಸದಲ್ಲಿ ಪೂಜಿಸಿ ದರ್ಶನ ಪಡೆದು ವಿರೂಪಾಕ್ಷನನ್ನು ದರ್ಶನ ಮಾಡಿದರೆ ಪುಣ್ಯಪ್ರಾಪ್ತಿಯಾಗುತ್ತದೆ. ಈ ಐದು ಪಂಚಲಿಂಗಗಳ ದರ್ಶನ ಪಡೆಯುವುದು ಪುಣ್ಯದ ಕೆಲಸ ಮತ್ತು ಜೀವನದ ಸಾರ್ಥಕ ಕೆಲಸ ಎಂದು ಈ ಭಾಗದ ಜನರು ನಂಬಿಕೊಂಡು ಬಂದಿದ್ದಾರೆ.**

# ಪುಣ್ಯ ಪ್ರಾಪ್ತಿಗಾಗಿ ಹಂಪಿ ಪಂಚಲಿಂಗ ಪ್ರದಕ್ಷಿಣೆ

ಶ್ರೀ ವಿರೂಪಾಕ್ಷಸ್ತು ವಿಶ್ವೇಶ್ವರಂ ತುಂಗಾಭದ್ರ ತು ಜಾಹ್ನವಿ ಪಂಪಾಕಾಶಿ ಸಮಾದಿವ್ಯ ಭುಕ್ತಿ ಮುಕ್ತಿ ಪ್ರದಾಯಿನೀ.

ಎಂದು ಸಪ್ತ ಋಷಿಗಳಿಂದ ಕರೆಸಿಕೊಂಡ ಪುಣ್ಯಕ್ಷೇತ್ರ ಹಂಪಿ. ಹಂಪಿಗೆ ಮತ್ತೊಂದು ಹೆಸರೇ ವಿರೂಪಾಕ್ಷ. ಈ ವಿರೂಪಾಕ್ಷನೆ ಕಾಶಿಯ ವಿಶ್ವೇಶ್ವರ ಅಥವಾ ವಿಶ್ವನಾಥ. ಇಲ್ಲಿ ಹರಿಯುತ್ತಿದ್ದ ಜಾಹ್ನವಿ ಕೂಡನದಿಯೇ ಇಂದಿನ ತುಂಗಭದ್ರೆ .ಹಂಪಿ ಮತ್ತು ವಿರೂಪಾಕ್ಷ ಎರಡು ದೈವ ಮೂಲದ ಶಬ್ದಗಳಾಗಿ ಮಹತ್ವವನ್ನು ಪಡೆದುಕೊಂಡಿವೆ., ಅತಿ ಪ್ರಾಚೀನ ಇತಿಹಾಸವಿರುವ ಧಾರ್ಮಿಕ ಕ್ಷೇತ್ರ. ಶಿವ ಪ್ರಧಾನವಾದ ಪುಣ್ಯಕ್ಷೇತ್ರ. ಭಾರತದಲ್ಲಿ ದೈವಿಕ ಶಕ್ತಿಯನ್ನು ಹೊಂದಿರುವ ಕ್ಷೇತ್ರಗಳೆಂದರೆ ಉತ್ತರದಲ್ಲಿ ಕಾಶಿ, ದಕ್ಷಿಣದಲ್ಲಿ ಹಂಪಿ, ಹಂಪಿಗೆ ವಿರೂಪಾಕ್ಷನೇ ಒಡೆಯ. ಹಂಪಿಯಲ್ಲಿ ಪ್ರಳಯವಾಗಲಾರದು ಕಲಿಗಾಲದ ಪ್ರಭಾವ ಉಂಟಾಗದು ಆತಂಕನ್ನು ಸುಳಿಯಲಾರನು ಕಾಮನೆಗೆ ಅವಕಾಶವಿಲ್ಲ ಮಾಯ ಪಾಪ ಇವುಗಳ ಮಾತು ನಡೆಯದು ಇದು ಶ್ರೇಷ್ಠ ಪುಣ್ಯಭೂಮಿ ಇದು ಮಂಗಳ ನಿಲಯ ಮುಕ್ತಿಯ ನೆಲವು ಎನ್ನುತ್ತಾನೆ ಹಂಪಿಯ ಹರಿಹರ.

ಹೌದು, ಹಂಪಿ ಒಂದು ವಿಶಿಷ್ಟ ಧಾರ್ಮಿಕ ಪುಣ್ಯಕ್ಷೇತ್ರ ಅಷ್ಟೇ ಅಲ್ಲ ಪಾರ್ವತಿ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ವಿವಾಹವಾದ ಸ್ಥಳವು ಹೌದು. ಇದು ಗಿರಿಜಾ ಕಲ್ಯಾಣ ನಡೆದ ಏಕೈಕ ಸ್ಥಳ ಹೀಗಾಗಿ ಕಾಶಿ ವಾರಣಾಸಿಗಿಂತ ಪವಿತ್ರವಾದದ್ದು ಮಿಗಿಲಾದದು ಪಂಪಾಪುರ ಎಂದು ತನ್ನ ರಗಳೆಯಲ್ಲಿ ಹರಿಹರ ಹೇಳಿದ್ದಾನೆ. ಹಂಪಿ ಎಂದರೆ ವಿರೂಪಾಕ್ಷ, ವಿರೂಪಾಕ್ಷ ಎಂದರೆ ಹೇಮಕೂಟ ಸಿಂಹಾಸಾನಾಧೀಶ್ವರ ಎನ್ನೊಡೆಯ ಪಂಪಾಪುರದರಸ ಎಂದು ವರ್ಣಿಸುತ್ತಾನೆ.

ಹರಿಹರ ಹಂಪಿಯ ವಿರೂಪಾಕ್ಷ ಕೇಂದ್ರದ ನಾಲ್ಕು ಗಡಿ ದೈವಗಳನ್ನು ಕುರಿತು ಹೀಗೆ ಹೇಳುತ್ತಾನೆ.

ಪುರಾದಳಂ ನಾಲ್ಕು ಬಾಗಿಲುಗಳಂ ನೋಡೆ ಒಪ್ಪುತ್ತಿರೆ ಸುತ್ತಯೋಜನ ಪ್ರಮಾಣಂ ನೋಡೆ

**ಅಲ್ಲಿ ಮೂಡಣ ಬಾಗಿಲೋಳಗಿಪ್ಪನುನ್ನತಂ**
**ಸಲ್ಲಿಲಿತ ಗುಣ ಕಿನ್ನರೇಶ್ವರಂ ಶಾಶ್ವತಂ**
**ಅಲ್ಲಿ ತಂಕಣ ಭಾಗಿಲೋಳಗಿಪ್ಪನ ಶಾಶ್ವತಂ**
**ಬಲ್ಲಶರಣರ ಜಂಬುಕೇಶ್ವರ ಶಾಶ್ವತಂ**
**ಪಶ್ಚಿಮದ್ವಾರದೊಳು ನೆನಸಿಪರನೊಪ್ಪದಿಂ**
**ನಿಶ್ಚಿಯದಿ ಸೋಮನಾಥಯ್ಯನತಿ ಪ್ರಮದಿಂ**
**ಉತ್ತರದ್ವಾರದೊಲುನೆಲಸಿಪರ್ನೀಶ್ವರಂ**
**ಉತ್ತಮ ಗುಣ ಸ್ಥಾಣು ವಾಣಿಭದ್ರೇಶ್ವರಂ**



ಶ್ರೀ ವಾಣಿಭದ್ರೇಶ್ವರ

ಅಂದರೆ ಕಿನ್ನರೇಶ್ವರ ಪೂರ್ವದಲ್ಲಿ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿಭದ್ರೇಶ್ವರ, ದಕ್ಷಿಣದಲ್ಲಿ ಜಂಬುಕೇಶ್ವರ ಇವುಗಳನ್ನು ಗಡಿ ದೈವಗಳಾಗಿ ಹೊಂದಿದ್ದಾನೆ.

ಪಂಪಾ ಮಹಾತ್ಮೆಯಲ್ಲಿ ಆಗ್ನೇಯಕ್ಕೆ ಸಿದ್ದೇಶ್ವರ ಲಿಂಗ, ವಾಯುವ್ಯಕ್ಕೆ ಮಹಾ ಕಾಲೇಶ್ವರ ಲಿಂಗ, ಈಶಾನ್ಯಕ್ಕೆ ದೇವಖಾತದ ಸೋಮನಾಥ ಲಿಂಗ, ನೈರುತ್ಯಕ್ಕೆ ಶಂಕರ ಶಂಕರೇಶ್ವರ ಲಿಂಗ ಗಡಿ ದೈವಗಳಾಗಿದ್ದವು ಎನ್ನುತ್ತದೆ. ಹಂಪಿಯ ವಿರೂಪಾಕ್ಷ ಲಿಂಗದ ಪೂರ್ವಕ್ಕೆ ಕಿನ್ನರೇಶ್ವರ ಅದರ ಕಲ್ಯಾಣ ತೀರ್ಥ, ದಕ್ಷಿಣಕ್ಕೆ ಜಂಬುಕೇಶ್ವರ ಜಂಬುನಾಥ ಅದರ ದಿವ್ಯತ ಕಾಂಚನ ತೀರ್ಥ, ಪಶ್ಚಿಮಕ್ಕೆ ಸೋಮೇಶ್ವರ ಅದರ ದಿವ್ಯ ತೀರ್ಥ ಸೋಮ ತೀರ್ಥ, ಉತ್ತರಕ್ಕೆ ವಾಣಿಭದ್ರೇಶ್ವರ ಅದರ ಸುಧಾ ತೀರ್ಥ, ಆಗ್ನೇಯಕ್ಕೆ ಸಿದ್ದೇಶ್ವರ ಲಿಂಗ ಅದರ ತೀರ್ಥ ಸಿದ್ದೇಶ್ವರ ತೀರ್ಥ, ನೈಋತ್ಯಕ್ಕೆ ಶಂಕರೇಶ್ವರ ಲಿಂಗ ಅಂದರೆ ಅದರ ತೀರ್ಥ ಶಂಕರ್ ತೀರ್ಥ, ವಾಯುವ್ಯಕ್ಕೆ ಮಹಾಕಾಲೇಶ್ವರ ಲಿಂಗ ಅದರ ತೀರ್ಥ ಮಹಾಕಾಲ ತೀರ್ಥೇಶ್ವರ ಲಿಂಗ ಅದರ ತೀರ್ಥ ದೇವತಾ ತೀರ್ಥ ಇವುಗಳು ವಿರುಪಾಕ್ಷಲಿಂಗ ಕೇಂದ್ರದ ಪರದೆಯಲ್ಲಿ ಎಂಟು ಗಡಿ ದೈವಗಳು ಹಾಗೂ ವಿರುಪಾಕ್ಷಲಿಂಗದ ತೀರ್ಥಗಳು ವಿರೂಪಾಕ್ಷನ ಮಹತ್ವವನ್ನು ಹೆಚ್ಚಿಸುತ್ತವೆ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Scan For Digital Colourful
HAMPI TIMES E-paper

ಹರಿಹರ ತನ್ನ ಪಂಪಾ ಕ್ಷೇತ್ರದ ರಗಳೆಯಲ್ಲಿ ಆದಿ ಕ್ಷೇತ್ರ ಇಷ್ಟೇ ಅಲ್ಲ ವಿರುಪಾಕ್ಷ ಹಲವಾರು ಚದುರ ಕಿಲೋಮೀಟರ್ ಸುತ್ತಲಿನ ಹಂಪಿಯ ಪ್ರದೇಶಕ್ಕೆ ವಿರೂಪಾಕ್ಷನೆ ರಾಜನೆಂಬಂತೆ ಇದ್ದವನು. ಯಾವುದೇ ರಾಜನಿಗು ಆಳ್ವಿಕೆ ಮಾಡಲು ಅವಕಾಶಗಳಿರಲಿಲ್ಲ. ಹಾಗಾಗಿ ಹಂಪಿಗೆ ಪಂಪಾಪುರದ ಒಡೆಯ ವಿರೂಪಾಕ್ಷನೇ ಅರಸನಾಗಿದ್ದ. ಮುಂದೆ ಬಂದ ವಿಜಯನಗರದ ಅರಸರು ಸಹ ವಿರೂಪಾಕ್ಷನೆ ಅರಸ ನಾವು ಅವನ ಪ್ರತಿನಿಧಿಗಳೆಂದು ರಾಜ್ಯಭಾರ ಮಾಡಿದರು. ಅವರು ತಮ್ಮ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ಎಂದೆ ಸಹಿ ಮಾಡುತ್ತಾ ಆದೇಶಗಳನ್ನು ಹೊರಡಿಸಿದ್ದಾರೆ. ಇದಕ್ಕೆ ಶಾಸನಗಳೆ ಸಾಕ್ಷಿಯಾಗಿವೆ. ವಿಜಯನಗರದ ಅರಸರು ವಿರೂಪಾಕ್ಷನ ಹೆಸರಿನಲ್ಲಿ ಆಡಳಿತ ನಡೆಸಿದ್ದಾರೆ. ದೇವರ



ಶ್ರೀ ಕಿನ್ನರೇಶ್ವರ



ಹಂಪಿ ಶ್ರೀ ವಿರೂಪಾಕ್ಷೇಶ್ವರ



ಶ್ರೀ ಸೋಮನಾಥೇಶ್ವರ

ಹೆಸರಿನಲ್ಲಿ ಆಡಳಿತ ನಡೆಸಿದ ಏಕೈಕ ಸಾಮ್ರಾಜ್ಯವೆಂದರೆ ಅದು ವಿಜಯನಗರ ಸಾಮ್ರಾಜ್ಯವೆಂದು ವಿದ್ವಾಂಸರು ಗುರುತಿಸಿದ್ದಾರೆ. ಹೀಗಾಗಿ ಹರಿಹರನಿಗೆ ವಿಜಯನಗರದ ಅರಸರಿಗೆ ಹಂಪಿ ಪ್ರದೇಶದ ಜನರಿಗೆ ವಿರೂಪಾಕ್ಷೇನೇ ಅರಸ ಎಂದು ನಂಬಿಕೊಂಡು ಬಂದಿದ್ದಾರೆ.

ಖ್ಯಾತ ಸಂಶೋಧಕರಾಗಿದ್ದ ಡಾ.ಚಿದಾನಂದ ಮೂರ್ತಿ ಅವರು

### ಶ್ರಾವಣದಲ್ಲಿ ಪಂಚಲಿಂಗ ಪ್ರದಕ್ಷಿಣೆ

ಶ್ರಾವಣದಲ್ಲಿ ದಕ್ಷಿಣ ಕಾಶಿಯ ಹಂಪಿ ಗಡಿದೈವಗಳಾದ ಪಂಚಲಿಂಗ ದರ್ಶನ ಪಡೆಯಲೂ ಒಂದು ಕ್ರಮವಿದೆ. ಸೂರ್ಯೋದಯಕ್ಕೆ ಹಂಪಿ ಅಧಿದೈವ ಶ್ರೀ ವಿರೂಪಾಕ್ಷೇಶ್ವರನ ದರ್ಶನ ಪಡೆದ ಬಳಿಕ ಆತನಿಗಿಂತಲೂ ಅಲ್ಪ ಎತ್ತರದಲ್ಲಿರುವ ಪೂರ್ವ ದಿಕ್ಕಿನ ಬುಕ್ಕಸಾಗರದ ಸಮೀಪದ ಶ್ರೀ ಕಿನ್ನರೇಶ್ವರ ದರ್ಶನ ಪಡೆಯುತ್ತಾರೆ. ನಂತರ ಈತನಿಗಿಂತಲೂ ಎತ್ತರ ಪ್ರದೇಶದಲ್ಲಿರುವ ಹೊಸಪೇಟೆ ಸಮೀಪದ ದಕ್ಷಿಣದಿಕ್ಕಿನ ಲೋಹಾದ್ರಿ ಬೆಟ್ಟದಲ್ಲಿರುವ ಶ್ರೀ ಜಂಬುನಾಥಸ್ವಾಮಿಯ ದರ್ಶನ ಪಡೆದನಂತರ ಈತನಿಂಗಲೂ ಎತ್ತರದಲ್ಲಿರುವ ಪಶ್ಚಿಮ ದಿಕ್ಕಿನ ಶಿವಪುರದ ಶ್ರೀ ಸೋಮೇಶ್ವರ ದರ್ಶನ ಪಡೆದು ಆನಂತರ ನಾಲ್ಕು ಲಿಂಗಗಳಿಗಿಂತ ಎತ್ತರದಲ್ಲಿರುವ ಉತ್ತರ ದಿಕ್ಕಿನ ಮಲ್ಲಾಪುರ ಸಮೀಪದ ಶ್ರೀ ವಾಣಿಭದ್ರೇಶ್ವರ ಸ್ವಾಮಿಯ ದರ್ಶನ ಪಡೆದು ಪುನಃ ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ ಪಡೆಯುತ್ತಾರೆ. ಒಂದೇ ದಿನದಲ್ಲಿ ಪಂಚಲಿಂಗ ದರ್ಶನ ಮಾಡುವ ಮೂಲಕ ಹಂಪಿ ಶ್ರೀ ವಿರೂಪಾಕ್ಷನ ಪ್ರದಕ್ಷಿಣೆಗೈದಂತಾಗಲಿದೆ. ಇದರಿಂದ ಭಕ್ತರ ಸಂಕಷ್ಟಗಳು ಕಳೆದು ಇಷ್ಟಾರ್ಥಗಳು ನೆರವೇರುತ್ತವೆ ಎಂಬುದು ಪರಂಪರೆಯಿಂದ ಬಂದ ಭಕ್ತಗಣದ ನಂಬಿಕೆಯಾಗಿದೆ.

ನಾಲ್ಕು ಗಡಿಗಳು ವಿರೂಪಾಕ್ಷನಿಗೆ ಇದ್ದುದ್ದನ್ನು ಗುರುತಿಸಿ ಈ ನಾಲ್ಕು ಕ್ಷೇತ್ರದ ದೈವದ ಗಡಿಯವರಿಗೆ ವಿರೂಪಾಕ್ಷ ಕ್ಷೇತ್ರವಾಗಿತ್ತು ಇದನ್ನೇ ವಿರೂಪಾಕ್ಷಪುರ ಎಂದು ಕರೆದಿದ್ದಾರೆ ಎಂದು ವಿಶ್ಲೇಷಿಸಿದ್ದರು. ಇಂತಹ ಶ್ರೇಷ್ಠವಾದ ದೈವಗಳನ್ನು, ತೀರ್ಥಗಳನ್ನು ಹೊಂದಿರುವಂತಹ ಕ್ಷೇತ್ರ ಮತ್ತೊಂದು ಕಾಣಸಿಗುವುದಿಲ್ಲ ಹೀಗಾಗಿಯೇ ವಿರೂಪಾಕ್ಷ ದಕ್ಷಿಣ ಭಾರತದ ಶ್ರೇಷ್ಠ ಅಧಿದೈವ. ವಿಶೇಷವಾಗಿ ವಿರೂಪಾಕ್ಷ ಆರಾಧನೆ ಪೂಜೆ ಮಾಡಿದವರಿಗೆ ವಿಶೇಷವಾದ ಪುಣ್ಯ ಪ್ರಾಪ್ತಿಯಾಗುತ್ತದೆ ಎನ್ನುವುದು ಜನರ ನಂಬಿಕೆ. ಹೀಗಾಗಿ ದಕ್ಷಿಣದ ಕಾಶಿ ಎಂದು ಜನರ ಹಂಪಿಗೆ ಬರುತ್ತಿದ್ದಾರೆ. ವಿಶೇಷವಾಗಿ ಶ್ರಾವಣ ಮಾಸದಲ್ಲಿ ವಿರುಪಾಕ್ಷನ ಈ ಗಡಿ ದೈವಗಳನ್ನು ಶ್ರಾವಣ ಮಾಸದಲ್ಲಿ ಪೂಜಿಸಿ ದರ್ಶನ ಪಡೆದು ವಿರೂಪಾಕ್ಷನನ್ನು ದರ್ಶನ ಮಾಡಿದರೆ ಪುಣ್ಯಪ್ರಾಪ್ತಿಯಾಗುತ್ತದೆ. ಈ ಐದು ಪಂಚಲಿಂಗಗಳ ದರ್ಶನ ಪಡೆಯುವುದು ಪುಣ್ಯದ ಕೆಲಸ ಮತ್ತು ಜೀವನದ ಸಾರ್ಥಕ ಕೆಲಸ ಎಂದು ಈ ಭಾಗದ ಜನರು ನಂಬಿಕೊಂಡು ಬಂದಿದ್ದಾರೆ.

ಹರಿಹರನ ತನ್ನ ಹಂಪೆಯರಸನ ರಗಳೆಯ ಕೊನೆಯಲ್ಲಿ



ಶ್ರೀ ಜಂಬುನಾಥಸ್ವಾಮಿ

ವಿರೂಪಾಕ್ಷನನ್ನು ಈ ರೀತಿ ಬೇಡುತ್ತಾನೆ ಕರುಣಿಸೋ ವಿರೂಪಾಕ್ಷ ಪರೀಕ್ಷಿಸು ವಿರುಪಾಕ್ಷ ರಕ್ಷಿಸೋ ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ ದಯೆಗೆಯ್ ವಿರೂಪಾಕ್ಷ ಜಯ ಜಯ ವಿರೂಪಾಕ್ಷ ಜಯ ಜಯ ನಮಸ್ತೆ ನಮಸ್ತೆ ನಮಸ್ತೆ. ನಾವು ಸಹ ಈ ಶ್ರಾವಣ ಮಾಸದಲ್ಲಿ ನಮ್ಮನ್ನು ಸಹ ರಕ್ಷಿಸೋ ಎಂದು ಪ್ರಾರ್ಥಿಸೋಣ.

ಪರಮೇಶ್ವರಸ್ಯ ಪಂಚಮುಖ ಪಂಚಮುಖಾಗಣಂ ಎಂಬಂತೆ ಈ ವಿರೂಪಾಕ್ಷ ಸ್ವಾಮಿಗೆ ಜಂಬುನಾಥೇಶ್ವರ ಸೋಮೇಶ್ವರ ಕಿನ್ನರಿ ವಾಣಿಭದ್ರೇಶ್ವರ ಕಿನ್ನರೇಶ್ವರ ಮುಖಗಳಿವೆ ಹೀಗಾಗಿಯೇ ಐದು ಲಿಂಗಗಳನ್ನು ಒಳಗೊಂಡ ಪಂಚಲಿಂಗ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ ಈ ವಿರೂಪಾಕ್ಷನಿಗೆ ಪ್ರತಿದಿನ ಮುಂಜಾವಿನಿಂದ ಸಂಜೆಯವರೆಗೆ ತ್ರಿಕಾಲ ಪೂಜೆ ನಡೆಯುತ್ತದೆ ತುಂಗಭದ್ರಾ ನದಿಯ ನೀರನ್ನು ತಂದು ಶ್ರೀ ಸ್ವಾಮಿಗೆ ಅಭಿಷೇಕವನ್ನು ನೆರವೇರಿಸಲಾಗುತ್ತದೆ. ಶ್ರಾವಣ ಶುದ್ಧ ಹುಣ್ಣಿಮೆ ಎಂದು ವಿರೂಪಾಕ್ಷನಿಗೆ ನೂಲುದಾರಣೆ ಮಾಡಲಾಗುತ್ತದೆ ಎರಡು ಬಾರಿ ನಡೆಯುವ ಜಾತ್ರೆ ಗಳೆಂದರೆ ಅದು ವಿರೂಪಾಕ್ಷನದ್ದೆ ಆಗಿದೆ. ಒಂದು ವಿರೂಪಾಕ್ಷ ಪಂಪಾದೇವಿಯರ ನಿಶ್ಚಿತಾರ್ಥ ಅಂದರೆ ಫಲಪೂಜೆ ಡಿಸೆಂಬರಿನಲ್ಲಿ ನಡೆದರೆ ಮತ್ತೊಂದು ಇವರ ವಿವಾಹ ಮಹೋತ್ಸವದ ರಥೋತ್ಸವ ಕಾರ್ಯ ಮೇ ಜೂನ್ ತಿಂಗಳಲ್ಲಿ ನಡೆಯುತ್ತದೆ. ಎರಡು ಉತ್ಸವಗಳು ನಡೆಯುವುದು. ಪಂಪಾ ವಿರೂಪಾಕ್ಷನದ್ದು ವಿಶೇಷವಾಗಿದೆ.

ಶ್ರಾವಣ ಮಾಸದಲ್ಲಿ ಹಂಪೆಯ ಸುತ್ತಲಿನ ಗ್ರಾಮಗಳ ಜನರು ಸುತ್ತಲಿನ ಗ್ರಾಮಗಳ ಜನರು ಪಾದಯಾತ್ರೆ ಮೂಲಕ ವಿರೂಪಾಕ್ಷ ಕ್ಷೇತ್ರಕ್ಕೆ ಬಂದು ಪೂಜೆ ಅಭಿಷೇಕ ಮೊದಲಾದವುಗಳನ್ನು ನೆರವೇರಿಸಿ ಪುನೀತರಾಗುತ್ತಾರೆ ಇದು ಹಿಂದಿನ ಪರಂಪರೆಯಿಂದ ನಡೆದುಕೊಂಡು ಬಂದಿದೆ. ವಿರೂಪಾಕ್ಷನಿಗೆ ಗಡಿ ದೈವಗಳಾಗಿರುವ ಜಂಬುನಾಥ ಕಿನ್ನರೇಶ್ವರ ಸೋಮನಾಥ ವಾಣಿವೀರಭದ್ರ ಇವುಗಳ ದರ್ಶನವನ್ನು ಹಲವಾರು ಜನ ಪಡೆದುಕೊಂಡು ಬಂದು ಕೊನೆಯಲ್ಲಿ ಪಂಪ ವಿರೂಪಾಕ್ಷಣವನ್ನು ಪಡೆದು ಪುನೀತರಾಗುತ್ತಿದ್ದಾರೆ ವಿಶೇಷವಾಗಿ ಮೂರನೇ ಸೋಮವಾರ ಈ ಪ್ರದೇಶದ ಜನ ವಿಶೇಷ ಆಚರಣೆಯನ್ನು ನಡೆಸಿಕೊಂಡು ಬಂದಿದ್ದಾರೆ ಹರಿಹರ ಹೇಳಿದಂತೆ ಕಾಶಿಯನ್ನು ಬಿಟ್ಟರೆ ದೈವ ಕ್ಷೇತ್ರ ಹಂಪಿಯೇ ಆಗಿದೆ.

## ಕವಿ ಮನಸು

### ದಡದಿ ನಿಂತಳೇತಕೆ



ನಸುಕಿನಲ್ಲಿ ಮುಸುಕನೆಳೆದು
ಖುಷಿಯ ನಿದ್ರೆ ಮಾಡದೆ
ಬಿಸಿಲು ತರುವ ಬಿಸಿಗೆ ಬೆದರಿ
ನಿಶೆಯಲೆದ್ದು ಬಂದಳೆ

ಕೊಡವನೊಂದು ನಡುವಲಿಟ್ಟು
ನಡೆದಳಾಕೆ ನೀರಿಗೆ
ಕುಡಿವ ಜಲವ ಕೊಡದಿ ತುಂಬಿ
ದಡದಿ ನಿಂತಳೇತಕೆ

ಕೊಳದಲಿಳಿದು ಜಳಕ ಗೈದು
ಬಳುಕುತಿರುವ ಬಾಲೆಗೆ
ಗೆಳೆಯನೊಡನೆ ಕಳೆದ ಕ್ಷಣದ
ಹಳೆಯ ನೆನಪು ಕಾಡಿತೆ

ಗಗನದಿಂದ ಮುಗಿಲ ತುಣುಕು
ಬಗೆದು ಕೇಶಕಿಟ್ಟಳೆ?
ಹಗಲಿನಲ್ಲಿ ಸಿಗದ ಚುಕ್ಕಿ
ತೆಗೆದು ನಯನಕಿಟ್ಟಳೆ?

ಚದುರೆ ಇವಳ ಅಧರದಲ್ಲಿ
ಮಧುರ ನಗುವು ಮೆರೆದಿದೆ
ಮದನ ಬಾಣ ಹೃದಯ ಸೇರಿ
ಕದಪು ಕೆಂಪಗಾಯಿತೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ವಿಧ ವಿಧ

ಒಂದೇ ಬಣ್ಣದ ಹೂವುಗಳಿದ್ದರೆ
ಒಂದೇ ಭಾವನೆ ಅರಳುವುದು
ಹಲವು ಬಣ್ಣದ ಹೂವುಗಳಿದ್ದರೆ
ಹಲವು ಭಾವನೆ ಅರಳುವವು।

ಒಂದೇ ಬಗೆ ಹಣ್ಣುಗಳಿದ್ದರೆ
ಒಂದೇ ಸಲ ಖರೀದೀಸುವರು
ಹಲವು ಬಗೆ ಹಣ್ಣುಗಳಿದ್ದರೆ
ಬಗೆ ಬಗೆ ಹಣ್ಣು ಖರೀದಿಸುವರು।

ಒಂದೇ ಬಗೆ ಕವನಗಳಿದ್ದರೆ
ಒಂದೇ ಕವನ ಓದುವರು
ಹಲವು ವಿಚಾರದ ಕವನಗಳಿದ್ದರೆ
ಎಲ್ಲವೂ ಓದುತ ಖುಷಿ ಪಡುವರು।

ಒಂದೇ ತರಹ ನಟಿಸಿದರೆ
ಒಂದೆರಡು ಸಲ ನೋಡುವರು
ವಿಧವಿಧ ಪಾತ್ರ ಮಾಡಿದರೆ
ನಟಿಸಿದ ಎಲ್ಲ ಚಿತ್ರ ನೋಡುವರು।

ನಿನ್ನ ಮನೆಯಲಿ ನೀ ಇರುವುದಾದರೆ
ಅವರ ಪಾಡಿಗೆ ಅವರ ಬಿಟ್ಟು ಬಿಡುವರು
ಜನಪರ ಕಾಳಜಿ ಮಾಡಲು ಬಯಸಿದರೆ
ನಿಮ್ಮನ್ನು ಕಂಡರೆ ಜನ
ಗೌರವತೋರುವರು।

– ಚಂದ್ರಶೇಖರಯ್ಯ ರೋಣದಮಠ

### ದೌರ್ಜನ್ಯದ ಮುಖಗಳು

ದೇಶದ ಪ್ರಗತಿಯಲ್ಲಿ
ಹೆಣ್ಣಿನ ಸ್ಥಾನಮಾನ ಹೆಚ್ಚಿಸಿ
ಮಹಿಳೆಯರ ಮೇಲಿನ
ದೌರ್ಜನ್ಯ ತಡೆಯಬೇಕಿದೆ

ಹೆಣ್ಣನ್ನು ಗೌರವಿಸಿ
ಪೂಜಿಸುವ ದೇಶದಲ್ಲಿ
ಹಿಂಸಾತ್ಮಕತೆಯ
ಅನ್ಯಾಯ ನಿಲ್ಲಬೇಕಿದೆ

ಬದುಕ–ಬೇಕೆಂಬ
ದುರಾಸೆಯಿಂದ ತುಳಿದು
ನಿಂತವರ ಕೆಟ್ಟತನವು
ಕೊನೆಗೊಳ್ಳಬೇಕಾಗಿದೆ

ಇದ್ದವರು ಇಲ್ಲದವರ
ಅಣಕಿಸಿ ನಿಂತವರ
ಮಟ್ಟ ಹಾಕಿ ಮುಂದಾಗುವ
ಅನಾಹುತ ತಪ್ಪಿಸಬೇಕಾಗಿದೆ

– ಜಿ ಆರ್ ಬಸವರಾಜೇಶ್ವರಿ ಹಗರಿಗಜಾಪುರ

# ಯಾರು ಶ್ರೇಷ್ಠರು...?



ಜವಾಬ್ದಾರಿ ಮತ್ತು ಕೆಲಸದ ವಿಚಾರದಲ್ಲಿ ಯಾರು ಶ್ರೇಷ್ಠರು ಎನ್ನುವ ವಿಚಾರದ ಚರ್ಚೆ ಪಂಚೇಂದ್ರೀಯಗಳ ಮಧ್ಯ ತಾರಕಕ್ಕೆ ಏರಿತ್ತು. ನಾನೇ ಶ್ರೇಷ್ಠ, ನಾನೇ ಶ್ರೇಷ್ಠ ಅನ್ನುವ ತರ್ಕಗಳು ಪ್ರತಿಯೊಬ್ಬರ ಮಧ್ಯ ದಿನೇ ದಿನೇ ತಾರಕ್ಕಕ್ಕೆ ಹೋಗಿ, ಇದರ ನಿರ್ಣಯವನ್ನು ಸ್ವತಃ ದೇವಲೋಕದ ಬ್ರಹ್ಮ ದೇವ ಬಗೆ ಹರಿಸಲೆಂದು ಎಲ್ಲರೂ ನ್ಯಾಯ ಕೇಳಲು ದೇವಲೋಕಕ್ಕೆ ಹೊರಟರು.

ಸೂರ್ಯ, ಚಂದ್ರ, ನಕ್ಷತ್ರಗಳು ಸಭೆಯಲ್ಲಿ ಹಾಜರಿದ್ದರು. ಇದೇ ಸಮಯಕ್ಕೆ ಕಣ್ಣು ಕಿವಿ ಮೂಗು ಮತ್ತು ಬಾಯಿ ಹಾಗು ಚರ್ಮಗಳು ಏಕ ಕಾಲಕ್ಕೆ ಬ್ರಹ್ಮನ ಮಹಾಸಭೆಯನ್ನು ಪ್ರವೇಶಮಾಡಿ ನಮಗೆ ನ್ಯಾಯ ಬೇಕು ನಮಗೆ ನ್ಯಾಯ ಬೇಕು ಎಂದು ಕೂಗುತ್ತ ಸಭೆಯ ಗಮನವನ್ನು ತಮ್ಮತ್ತ ಸೆಳೆಯಲು ಪ್ರಯತ್ನಿಸಿದವು. ಇವರ ಮನದಾಳದ ಮಾತುಗಳನ್ನು ಮದಲೇ ಅರಿತಿದ್ದ ಬ್ರಹ್ಮ ದೇವ ನೇರವಾಗಿ ವಿಷಯದ ಬಗ್ಗೆ ಯಾರನ್ನೂ ವಿಚಾರಿಸದೆ ಇಂದಿನ ಸಭೆ ಇಲ್ಲಿಗೆ ಮುಕ್ತಾಯವಾಯಿತು, ನಿಮ್ಮ ಸಮಸ್ಯೆಯನ್ನು ನಾಳೆಯ ಸಭೆಯಲ್ಲಿ ಚರ್ಚಿಸೋಣ ಎಂದು ಹೇಳಿ ಸಭೆಯಿಂದ ಹೊರನೆಡೆದರು.

ಸರಿಯಾದ ಸಮಯಕ್ಕೆ ಅಲ್ಲಿಗೆ ಬಂದ ನಾರದರು ಅರೆರೆ ಏನಾಶ್ಚರ್ಯ ಸೌಂದರ್ಯದ ಗಣಿಯನ್ನೆ ತನ್ನಲ್ಲಿ ಇಟ್ಟುಕೊಂಡುರಿವ ಕಣ್ಣು, ಪ್ರಂಪಂಚದ ಎಲ್ಲ ಮಧುರಾತಿ ಮಧುರ ಸ್ವರಗಳನ್ನು ಆಲಿಸಲು ಕಾರಣವಾದ ಕಿವಿ, ಜಗತ್ತಿನ ಎಲ್ಲ ಸುವಾಸನೆಗಳ ಸರದಾರ ಮೂಗು ಮತ್ತು ರುಚಿಗಾರ ಹದಗಾರ ಎಂದೆಲ್ಲಾ ಪ್ರಸಿದ್ದಿಯಾದ, ಜಗತ್ತಿನ ಕಂಪನ್ನೆಲ್ಲ ತನ್ನಲ್ಲೇ ಅಡಗಿಸಿಕೊಂಡಿರುವ ನಾಲಿಗೆ, ಸೌಂದರ್ಯದ ದೇಹಕ್ಕೆ, ನರ–ಹರಿಯರೆನ್ನದೆ ನರನಾಡಿಗಳಲ್ಲಿ ಶಕ್ತಿಯ ಸಂಚಯನಕ್ಕೆ ಕಾರಣವಾದ ಚರ್ಮವೂ ಇಲ್ಲೇ ಇದೇ, ಏನು ವಿಚಾರ? ಯಾತಕ್ಕಾಗಿ ಎಲ್ಲರು ಒಟ್ಟೊಟ್ಟಿಗೆ ಇಂದ್ರಲೋಕದತ್ತ ಪ್ರಯಾಣ ಬೆಳೆಸಿದ್ದೀರಿ? ಎಂದು ಕೇಳಿದ ತಕ್ಷಣ ಪ್ರತಿಯೊಬ್ಬರೂ ಅವರವರಿಗೆ ಸಂಬಂಧಿಸಿ ದವರ ಮೂಲಕ ತಮ್ಮನ್ನೇ ಶ್ರೇಷ್ಠರೆಂದು ಗುರುತಿಸಬೇಕು ಎನ್ನುವಂತೆ ಎಲ್ಲರ ಮೇಲೆ ಬಲವಂತದ ಅಭಿಪ್ರಾಯ ಹೇರತೊಡಗಿದವು.

ಇವೆರೆಲ್ಲರ ಮಾತು ಕೇಳಿದ ನಾರದರು, ಯಾರನ್ನು ತಾನು ಶ್ರೇಷ್ಠನೆಂದು ಗುರುತಿಸಬೇಕೆಂದು ತಿಳಿಯದೆ ಸ್ವಲ್ಪ ಗಲಿಬಿಲಿಯಾದನು. ಈ ವಿಚಾರದಲ್ಲಿಎಲ್ಲರೊಂದಿಗೆ ಚರ್ಚಿಸಿ ನಾಳೆಯ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕೆಂದು ನೀವು ಸಹ ಬ್ರಹ್ಮ ದೇವನಲ್ಲಿ ಒತ್ತಡ ಹೇರಬೇಕೆಂದು ಎಲ್ಲ ಪಂಚೇಂದ್ರಿಯಗಳು ನಾರದರಲ್ಲಿ ಕೇಳಿಕೊಂಡರು.

ರಾತ್ರಿಯಲ್ಲ ಯೋಚಿಸಿದ ನಾರದರು ಒಂದು ಉಪಾಯವನ್ನು ಮಾಡಿದರು. ಈ ಎಲ್ಲ ಪಂಚೇಂದ್ರಿಯಗಳನ್ನು ಕರೆದು, ನಾಳೆಯ ದಿವಸ ನೀವೆಲ್ಲ ಭೂ ಲೋಕದಲ್ಲಿ ನೆಡೆಯುವ ಒಂದು ಜಾತ್ರೆಯಲ್ಲಿ ಭಾಗವಹಿಸಿ ಬನ್ನಿ ಆ ನಂತರ ನಿಮ್ಮ ವಿಚಾರವನ್ನು ಬಗೆಹರಿಸೋಣ ಎಂದು ಎಲ್ಲರನ್ನೂ ಭೂಲೋಕಕ್ಕೆ ಕಳುಹಿಸಿಕೊಟ್ಟನು.

ಇನ್ನೇನು ನಾಳೆಯ ಸಭೆಯಲ್ಲಿ ನಮ್ಮ ಶ್ರೇಷ್ಠತೆಯ ಬಗ್ಗೆ ಎಲ್ಲರಿಗೂ ಗೊತ್ತಾಗುತ್ತದೆ ಎಂದು ಬೀಗುತ್ತಾ ಎಲ್ಲರೂ ಭೂಲೋಕಕ್ಕೆ ಬಂದರು ಜಾತ್ರೆಯ ಎಲ್ಲಾ ವಿಭಾಗಗಳಲ್ಲೂ ಸುತ್ತುವರಿದರು. ಅಲ್ಲೊಬ್ಬ ಮನುಷ್ಯ ಹಗ್ಗದ ಮೇಲೆ ಒಂದು ಕೋಲಿನ ಸಹಾಯದಿಂದ ನೆಡೆದಾಡುತ್ತಿದ್ದ ಅಷ್ಟು ಎತ್ತರದಲ್ಲಿ ಒಂಟಿ ಹಗ್ಗದ ಮೇಲೆ ನೆಡೆದಾಡುತ್ತಿದ್ದ ಆ ಮನುಷ್ಯನಿಗೆ ಎರಡೂ ಕಣ್ಣುಗಳಿರಲಿಲ್ಲ..!



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಆದರೂ ಅವನು ಹೇಗೆ ನೆಡೆಯುತ್ತಿರಬಹುದು? ಕಣ್ಣಿಗೆ ಪರಮಾಶ್ಚರ್ಯವಾಯಿತು, ಹಾಗೆಯೆ ಕಣ್ಣಿಗೆ ಮನಸ್ಸಿನಲ್ಲೇ ತನ್ನ ಔಚಿತ್ಯದ ಅರಿವು ಉಂಟಾಯಿತು.

ಹಾಗೆ ಮುಂದೆ ಸಾಗುತ್ತಿದ್ದಾಗ ಹಾವಾಡಿಗನೊಬ್ಬನು ಅತ್ಯಂತ ಮಧುರವಾಗಿ ಪುಂಗಿಯನ್ನು ಊದುತ್ತಾ ಹಾವನ್ನು ತನ್ನ ತಾಳಾಕ್ಕೆ ತಕ್ಕಂತೆ ಕುಣಿಸುತ್ತಿದ್ದ. ಹಾಗೆಯೆ ಅದಕ್ಕೆ ವಿವಿಧ ಆಜ್ಞೆನಗಳನ್ನು ನೀಡುತ್ತ ತನ್ನ ಮನ ಬಂದಂತೆ ಕುಣಿಸುತ್ತಿದ್ದ. ಇದರಲ್ಲೇನು ಆಶ್ಚರ್ಯವಿಲ್ಲವಲ್ಲ ಎನ್ನುತ್ತಿದ್ದ ಕಿವಿಗೆ ಪಕ್ಕದಲ್ಲೇ ಇದ್ದ ನಾಲಿಗೆ ಹೇಳಿತು, ದಡ್ಡ ಆ ಸರಿಸೃಪಕ್ಕೆ ಕಿವಿಗಳೇ ಇರುವುದಿಲ್ಲ ಆದರೂ ಆ ಹಾವು ಆವಾಡಿಗ ಹೇಳಿದ ಎಲ್ಲ ಮಾತುಗಳನ್ನು ಕೇಳುತ್ತಿದೆಯಲ್ಲ! ಅಂದರೆ ಆ ಸರಿಸೃಪಕ್ಕೆ ನಿನ್ನ ಅವಶ್ಯಕತೆ ಇಲ್ಲ ಎಂದಾಯಿತು ಅಲ್ಲವೆ? ನಾಲಿಗೆಯ ಈ ಮಾತನ್ನು ಕೇಳಿದ ಕಿವಿಗೆ ಎಲ್ಲಿಲ್ಲದ ಕೊಪ ಬಂದಿತು, ಆದರೆ ಏನು ಮಾಡುವುದು ಅದು ಸತ್ಯವೂ ಆಗಿತ್ತಲ್ಲ ಅದಕ್ಕೆ ತೆಪ್ಪಗೆ ಮುಖ ತಿರಿವಿಕೊಂಡು ಮುಂದೆ ಹೋಯಿತು.

ಮುಂದುವರಿದು ಜಾತ್ರೆಯಲ್ಲಿ ರುಚಿ ರುಚಿಯಾದ ಖಾದ್ಯಗಳು ತಯಾರಾಗುತ್ತಿದ್ದವು ಇದನ್ನು ಕಂಡ ಇಂತಹ ರುಚಿಯನ್ನು ಸವಿಯಲು ನನ್ನಿಂದ ಮಾತ್ರ ಸಾಧ್ಯ ಎನ್ನುತ್ತ ನಾಲಿಗೆ ಬೀಗುತ್ತಿತ್ತು. ಪಕ್ಕದಲ್ಲೆ ಇರುವೆಗಳ ಸಾಲೊಂದು ನೇರವಾಗಿ ಸಿಹಿಯಾದ ಖಾದ್ಯಗಳ ಬಳಿ ಬಂದು ಒಂದೊಂದೇ ಸಕ್ಕರೆಯ ಹರಳನ್ನು ತಮ್ಮ ಬಾಯಿಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದವು. ಇದನ್ನು ಕಂಡ ಚರ್ಮವು ಹೇಳಿತು ಹೇ... ನೋಡಿ ಅಲ್ಲಿ ನಾಲಿಗೆಯು ಇಲ್ಲ..! ಕಣ್ಣೂ ಇಲ್ಲಾ..! ಕೇವಲ ವಾಸನೆಯ ಜಾಡುನ್ನು ಹಿಡಿದು ಇರುವೆಗಳು ತಮಗೆ ಬೇಕಾದ ಎಲ್ಲವನ್ನು ಪಡೆದುಕೊಳ್ಳುತ್ತವೆ ಎಂದಿತು.

ನಾಲಿಗೆಯು ಬಾಯಿಯ ಒಳಗೆ ಲೊಚಗುಡುತ್ತ ಮುಂದೆ ಹೊಯಿತು. ಇವೆಲ್ಲವುಗಳ ಮಾತುನ್ನು ಸುಮ್ಮನೆ ಕೇಳುತ್ತಿದ್ದ ಚರ್ಮ ಸುಮ್ಮನೆ ತನ್ನ ಪಾಡಿಗೆ ತಾನು ಮುಂದೆ ಮುಂದೆ ಹೋಗುತ್ತಿತ್ತು.

ಮರುದಿನ ಸಭೆಗೆ ಎಲ್ಲರೂ ಬ್ರಹ್ಮಾದಿ ಎಲ್ಲಾ ದೇವತೆಗಳು ಹಾಜರಿದ್ದರು. ಜೊತೆಗೆ ಸೂರ್ಯ, ಚಂದ್ರ ಎಲ್ಲ ಗ್ರಹಗಳಾದಿಯಾಗಿ ಸಭೆಯು ತುಂಬಿ ತುಳುಕುತಿತ್ತು. ಜೊತೆಗೆ ಸ್ಪರ್ಧೆಯಲ್ಲಿಇದ್ದ ಎಲ್ಲರೂ ಬಂದು ಸೇರಿದಾಗ ಸಭೆ ಆರಂಭವಾಯಿತು. ಭೂಮಿಯಿಂದ ಹಿಂದಿರುಗಿದವರಲ್ಲಿ ಕೇವಲ ಕಣ್ಣು ಕಿವಿ ಮತ್ತು ನಾಲಿಗೆ ಸಭೆಯಲ್ಲಿ ಭಾಗವಹಿಸಿದ್ದವು. ಉಳಿದ ಮೂಗು ಮತ್ತು ಚರ್ಮ ಅಂದಿನ ಸಭೆಗೆ ಗೈರಾಗಿದ್ದವು..! ಮೂಗು ಮತ್ತು ಚರ್ಮ ಬರದಿರುವುದನ್ನು ಕಂಡು ಉಳಿದ ಜ್ಞಾನೇಂದ್ರಿಯಗಳು ಮನಸ್ಸಿನಲ್ಲೆ ಸಂತೋಷವಾಗಿದ್ದವು.

ಬ್ರಹ್ಮನ ಒಪ್ಪಿಗೆಯನ್ನು ಪಡೆದ ನಾರದರು ಸಭೆಯನ್ನು ಆರಂಭಿಸಿ ಒಬ್ಬೊಬ್ಬರ ಕಥೆಯನ್ನು ಆಲಿಸಿದರು. ಕಣ್ಣು ನಾನಿಲ್ಲದೆ ಏನು ಇಲ್ಲ ನಾನಿಲ್ಲದಿದ್ದರೆ ಈ ಜಗತ್ತೆ ಕತ್ತಲು ಎಂದಿತು, ಕಿವಿಯು ಸಹ ಇಲ್ಲ ಇಲ್ಲ ಒಂದು ವೇಳೆ ನಾನಿಲ್ಲದ್ದಿದ್ದರೆ ಇಂದಿನ ಸಭೆಯಲ್ಲಿ ಯಾರು ಯಾರಿಗೆ ಏನು ಹೇಳುತ್ತಿದ್ದಾರೆ ಎನ್ನುವುದೇ ಗೊತ್ತಾಗುತ್ತಿದ್ದಿಲ್ಲ ಎಂದಿತು. ಮುಂದುವರಿದ ನಾಲಿಗೆ ಒಂದು ಮಾತು ನಾನು ಆಡಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದು ನಿಮಗಾರಿಗೂ ಅಂದಾಜಿಲ್ಲ ನನ್ನಿಂದಲೆ ಎಲ್ಲ ಮಂತ್ರಗಳು, ತಂತ್ರಗಳು, ವೇದ ಉಪನಿಷದ್ದಗಳ ಪಠಣ ಸಾಧ್ಯ, ನಾನಿಲ್ಲವೆಂದರೆ ಏನು ಇಲ್ಲ ಎಂದಿತು.

ಇದನ್ನೆಲ್ಲ ಕೇಳಿದ ನಾರದರು ಇಲ್ಲಿ ಯಾರು ಶ್ರೇಷ್ಠರಲ್ಲ ಮತ್ತು ಯಾರು ಕಮ್ಮಿ ಎಂಬುದಿಲ್ಲ ಎನ್ನುತ್ತಾ ಮೊನ್ನೆ ಮೊನ್ನೆ ಒಬ್ಬ ಮನುಷ್ಯನ ಕಣ್ಣಿ ತಪ್ಪಿನಿಂದ ತಪ್ಪಾಗಿ ಅರ್ಥೈಸಿಕೊಂಡ ಆವನ ಬುದ್ದಿಯು, ಆಡಬಾರದ ಮಾತೊಂದನ್ನು ನಾಲಿಗೆಯಿಂದ ಆಡಿಸಿತು, ಇದರ ಪರಿಣಾಮವಾಗಿ ಎದುರಿಗಿದ್ದವನ ಪಿತ್ತ ನೆತ್ತಿಗೇರಿ ಪಟಾರ್... ಎಂದು ಆ ಮನುಷ್ಯನ ಕೆನ್ನೆಗೆ ಹೊಡೆದು ಬಿಟ್ಟನು. ಇದರಿಂದ ಅವನ ಕೆನ್ನೆ ಕಡುಬಿನ ಹಾಗೆ ಊದಿಕೊಂಡಿತ್ತು, ಹಾಗೆಯೆ ಅವನ ಬಾಯಿಯಲ್ಲಿದ್ದ ಎಲ್ಲಾ ಹಲ್ಲುಗಳು ಉದುರಿ ಹೋದವು ಎನ್ನುತ್ತಿದ್ದಾಗ ಎಲ್ಲಾ ಪಂಚೇಂದ್ರಿಯಗಳು ಬೆಪ್ಪಸ ಬೆರಗಾಗಿ ಹೌದೇ ಎನ್ನುವಂತೆ ನಾಚಿಕೆಯಿಂದ ತಲೆ ಕೆಳಗೆ ಮಾಡಿ ನಿಂತುಕೊಂಡವು.

ಇದನ್ನೆಲ್ಲ ಗಮನಿಸುತ್ತಿದ್ದ ಬ್ರಹ್ಮ ದೇವ ಪಂಚೇಂದ್ರಿಯಗಳನ್ನು ಉದ್ದೇಶಿಸಿ, ಸರಿ ಆಗಿದ್ದು ಆಗಿ ಹೋಯಿತು ನೀವಾರು ಮರುಕಪಡುವ ಅವಶ್ಯಕತೆ ಇಲ್ಲ. ನಿಮ್ಮ ತಪ್ಪಿನ ಅರಿವು ನಿಮಗಾಗಿದೆ ಎಂದುಕೊಂಡಿದ್ದೇನೆ. ಇಲ್ಲಿ ನಾನು ಶ್ರೇಷ್ಠನೆಂದೂ ಭಾವಿಸಿಲ್ಲ, ಕನಿಷ್ಠನೆಂದೂ ಭಾವಿಸಿಲ್ಲ. ನಾನು ನನ್ನ ಜವಾಬ್ದಾರಿಯನ್ನು ಮಾಡುತ್ತಿದ್ದೇನೆ. ಹಾಗೆಯೆ ನೀವು ನಿಮ್ಮ ಕೆಲಸವನ್ನು ಮಾಡಿ. ನೀವು ಇಲ್ಲದೆ ಹೋಗಿದ್ದರೆ ಮನುಷ್ಯರ ಜಗತ್ತು ಹೇಗಿರುತ್ತಿತ್ತು ಎಂದು ಒಮ್ಮೆ ಊಹಿಸಿ. ಹಾಗಾಗಿ ನೀವು ಮಾಡುವ ಕೆಲಸದಲ್ಲಿ ಹೆಗ್ಗಳಿಕೆಯೂ ಇಲ್ಲ. ಅದು ನಿಮ್ಮ ಕೆಲಸ, ಕರ್ತವ್ಯ. ಕರ್ತವ್ಯದಲ್ಲಿ ಶ್ರೇಷ್ಠತೆಯ ಲೆಕ್ಕ ಹಾಕುವುದು ನನಗೆ ಸರಿಯಲ್ಲ ಎಂದು ಹೇಳುತ್ತಿದ್ದಂತೆ, ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿದರು. ಆಗ ಬ್ರಹ್ಮ, ಯಾರು ಶ್ರೇಷ್ಠರು ಎಂಬುದನ್ನು ನಾನು ತೀರ್ಮಾನಿಸುವ ಅಗತ್ಯ ಇಲ್ಲ. ಶ್ರೇಷ್ಠತೆ ಬರುವುದು ಬರೀ ಬಲದಿಂದಲ್ಲ, ತನ್ನ ಶಕ್ತಿಯಿಂದಲ್ಲ, ಅದರ ಜೊತೆಗೆ ನಿಮ್ಮ ಸಹಕಾರ ಹೊಂದಾಣಿಕೆ, ನಿಮ್ಮ ನಡವಳಿಕೆಯಿಂದಲೂ ಬರುತ್ತದೆ ಹಾಗಾಗಿ ಇಲ್ಲಿ ಯಾರು ಶ್ರೇಷ್ಠರಲ್ಲ ಯಾರೂ ಅದಮರಲ್ಲ, ಆದರೆ ಒಬ್ಬರಿಗೊಬ್ಬರು ಹೊಂದಿಕೊಂಡು ಹೋದರೆ ಎಲ್ಲವೂ ಸರಿಯಾಗಿರುತ್ತದೆ ಎನ್ನುತ್ತ ಸಭೆಯನ್ನು ಮುಗಿಸಿದರು. ಸಭೆಯ ನಂತರ ಎಲ್ಲಾ ಪಂಚೇಂದ್ರೀಯಗಳು ನಿಜವಾದ ಜ್ಞಾನೇಂದ್ರಿಯಗಳಂತೆ ನಗು ನಗುತ್ತಾ ಹೊರ ಬಂದವು.

# ಅಂಗನವಾಡಿಗಳಲ್ಲಿ ನ್ಯೂನ್ಯತೆ ಸರಿಪಡಿಸಲು ಅಗತ್ಯ ಕ್ರಮ

## ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರ ಅಧ್ಯಕ್ಷ ನ್ಯಾ.ಚಂದ್ರಶೇಖರ ಸಿ ಹೇಳಿಕೆ | ಸಮಸ್ಯೆಗಳನ್ನು ಬೇಗನೆ ಉಚ್ಚ ನ್ಯಾಯಾಲಯಕ್ಕೆ ಕಳುಹಿಸಲಾಗುತ್ತದೆ

■ ಹಂಪಿ ಟೈಮ್ಸ್ ಕೊಪ್ಪಳ

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳ ವ್ಯಾಪ್ತಿಯಲ್ಲಿನ ಕೆಲವು ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನ್ಯಾಯಾಧೀಶರು ಅನೀರಿಕ್ಷಿತ ಭೇಟಿ ನೀಡಿದ ವೇಳೆ ಸಾಕಷ್ಟು ನ್ಯೂನತೆಗಳು ಕಂಡು ಬಂದಿವೆ. ಈ ಬಗ್ಗೆ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸವಿರವಾದ ವರದಿ ತಯಾರಿಸುತ್ತಿದ್ದು, ಈ ಸಮಸ್ಯೆಗಳನ್ನು ಬೇಗನೆ ಸರಿಪಡಿಸಲು ಕೋರಿ ಉಚ್ಚ ನ್ಯಾಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ವರದಿಯನ್ನು ಕಳುಹಿಸಲಾಗುವುದು ಎಂದು ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ.ಚಂದ್ರಶೇಖರ ಸಿ ಅವರು ತಿಳಿಸಿದರು.

ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ಆಗಸ್ಟ್ 9ರಂದು ಪತ್ರಿಕಾಗೋಷ್ಠಿ ನಡೆಸಿ ಅವರು ಮಾಹಿತಿ ನೀಡಿದರು. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಅಪೌಷ್ಠಿಕ ನಿವಾರಣಾ ರಾಜ್ಯ ಸಲಹಾ ಸಮಿತಿ ಅಧ್ಯಕ್ಷರಾದ ವೇಣುಗೋಪಾಲಗೌಡ ಅವರು ಬೆಂಗಳೂರಿನಲ್ಲಿ ಅಂಗನವಾಡಿಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದಾಗ ಕೆಲವು ನ್ಯೂನ್ಯತೆಗಳು ಕಂಡು ಬಂದು ಅದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಮುಂದುವರೆದು ಅಪೌಷ್ಠಿಕ ನಿವಾರಣಾ ರಾಜ್ಯ ಸಲಹಾ ಸಮಿತಿಯಿಂದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಡಬ್ಲ್ಯೂ.ಪಿ.ನಂ. 38157/2011ರಲ್ಲಿ ವರದಿ ಸಲ್ಲಿಸಬೇಕಾಗಿರುವ ಕಾರಣ ಆಯಾ ಜಿಲ್ಲೆಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಸದಸ್ಯ ಕಾರ್ಯದರ್ಶಿಗಳು ಆಯಾ ಜಿಲ್ಲೆಗಳಲ್ಲಿನ ಅಂಗನವಾಡಿಗಳಿಗೆ ಭೇಟಿ ನೀಡಿ ಅಂಗನವಾಡಿಗಳಲ್ಲಿನ ಮೂಲಭೂತ ಸೌಕರ್ಯ ಕುಂದುಕೊರತೆಗಳ ಕುರಿತು ಪರಿಶೀಲಿಸಿ ಪತ್ರಿಕಾಗೋಷ್ಠಿ ನಡೆಸಿ ದಾಖಲೆ ಸಮೇತ ವರದಿ ಸಲ್ಲಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ತಿಳಿಸಿದನ್ವಯ ಕೊಪ್ಪಳ ಜಿಲ್ಲೆಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿ ಕೊಪ್ಪಳ ಜಿಲ್ಲೆಯ 7 ತಾಲೂಕುಗಳ ವ್ಯಾಪ್ತಿಯ ವಿವಿಧ ಅಂಗನವಾಡಿಗಳಿಗೆ ಭೇಟಿ ನೀಡಿ ಅಲ್ಲಿ ಕಂಡು ಬಂದ ನ್ಯೂನ್ಯತೆಗಳ ಬಗ್ಗೆ ವರದಿ ಸಿದ್ಧಪಡಿಸುತ್ತಿದೆ ಎಂದು ಅವರು ಮಾಹಿತಿ ನೀಡಿದರು.




ಬಹಳಷ್ಟು ಅಂಗನವಾಡಿಗಳಲ್ಲಿ ಆಟೀಕೆ ಸಾಮಾನುಗಳು ಮಕ್ಕಳ ಕೈಗೆ ಸಿಗುವಂತೆ ಇಟ್ಟಿರಲಿಲ್ಲ ಮತ್ತು ಧೂಳುಗಟ್ಟಿತ್ತು. ಬೆಳಿಗ್ಗೆ 9.30 ರಿಂದ ಸಂಜೆ 4 ಗಂಟೆವರೆಗಿನ ಅವಧಿಯಲ್ಲಿ ಬಹಳಷ್ಟು ಅಂಗನವಾಡಿಗಳು ನಡೆಯುತ್ತಿಲ್ಲ. ಈ ವರದಿಯ ಬಗ್ಗೆ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವೇ ಕ್ರಮ ವಹಿಸಬೇಕು ಎಂದು ಉಚ್ಚ ನ್ಯಾಯಾಲಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿರ್ದೇಶನ ಬಂದಲ್ಲಿ, ಅಂಗನವಾಡಿಗಳಲ್ಲಿನ ಸಮಸ್ಯೆಗಳನ್ನು ಸರಿಪಡಿಸಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ನಿಯಮಾನುಸಾರ ಕ್ರಮ ವಹಿಸುತ್ತದೆ ಎಂದು ನ್ಯಾಯಾಧೀಶರು ತಿಳಿಸಿದರು.

ಈ ವರದಿಯನ್ನು ಆಧರಿಸಿ ಸೂಕ್ತ ಕ್ರಮ ವಹಿಸಲು ಕೊಪ್ಪಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಮತ್ತು ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಹ ವರದಿಯನ್ನು ಸಲ್ಲಿಸಲಾಗುವುದು ಎಂದು ನ್ಯಾಯಾಧೀಶರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಎಂ.ಆರ್. ಒಡೆಯರ್, ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಾದ ಮಹಾಂತೇಶ ದರ್ಗದ ಸೇರಿದಂತೆ ಇತರರು ಹಾಜರಿದ್ದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ। ಸಂವತ್ಸರ: ಕ್ರೋಧಿ

**11–08–2024 – ಭಾನುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಸ್ವಾತಿ |
| ಯೋಗ | : ಶುಭ |
| ಕರಣ | : ಗರಜ |
| ಸೂರ್ಯೋದಯ | : 06:02:54 |
| ಸೂರ್ಯಾಸ್ತ | : 19:00:55 |
| ರಾಹು | : 17:24–19:01 |
| ಯಮಘಂಡ | : 12:32–14:09 |
| ಗುಳಿಕ | : 15:46–17:24 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 10–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1633.00 ಅಡಿ |
| ಒಳ ಹರಿವು | 40925 ಕ್ಯುಸೆಕ್ |
| ಹೊರ ಹರಿವು | 28133 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 105.788 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1628.63 ಅಡಿ |
| ಒಳ ಹರಿವು | 22378 ಕ್ಯುಸೆಕ್ |
| ಹೊರ ಹರಿವು | 9442 ಕ್ಯುಸೆಕ್ |
| ಸಾಮರ್ಥ್ಯ | 89.008 ಟಿಎಂಸಿ |

# ನಾನು ರಾಚಯ್ಯನವರ ಪ್ರಾಡಕ್ಟು: ಸಿ.ಎಂ

## ನಾನು ಶೋಷಿತರ ಪರವಾಗಿದ್ದೇನೆ : ಸಿ.ಎಂ.ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಚಾಮರಾಜನಗರ**

ರಾಚಯ್ಯ ಅವರ ಮಾರ್ಗದರ್ಶನದಂತೆ ನಾನು ಶೋಷಿತರ ಪರವಾಗಿದ್ದೇನೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ನುಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಜಿ ರಾಜ್ಯಪಾಲ ದಿ॥ ಬಿ.ರಾಚಯ್ಯ ಅವರ ಸ್ಮಾರಕವನ್ನು ಉದ್ಘಾಟಿಸಿ ಮಾತನಾಡಿದರು.

ರಾಚಯ್ಯ ಅವರು ರಾಜ್ಯ ರಾಜಕಾರಣದ ಅತ್ಯಂತ ಮುತ್ಸದ್ದಿ ರಾಜಕಾರಣಿ. ಹೆಚ್ಚು ಮಾತಾಡುತ್ತಿರಲಿಲ್ಲ. ಬಡವರ ಪರವಾಗಿ ಹೆಚ್ಚೆಚ್ಚು ಕೆಲಸ ಮಾಡುತ್ತಿದ್ದರು ಎಂದರು.

ರಾಮಕೃಷ್ಣ ಹೆಗಡೆ ಅವರ ಮಂತ್ರಿ ಮಂಡಲದಲ್ಲಿ ಪ್ರಭಾವಿ ಆಗಿದ್ದ ರಾಚಯ್ಯನವರಿಗೆ, ಪ್ರತಿಭಾವಂತ, ಜನಪರ ಕಾಳಜಿಯುಳ್ಳ ರಾಜಕಾರಣಿಗಳನ್ನು ಹತ್ತಿರಕ್ಕೆ ಕರೆದು ಬೆಳೆಸುವ ಗುಣ ಇತ್ತು. ಹೆಗಡೆ ಮತ್ತು ರಾಚಯ್ಯ ಅವರು ನನ್ನನ್ನು ಕರೆದು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದರು. ಬಳಿಕ ನನ್ನನ್ನು ಮಂತ್ರಿ ಮಾಡಿದರು ಎಂದು ಇತಿಹಾಸ ಸ್ಮರಿಸಿಕೊಂಡರು.

ಅವತ್ತು ನಾನು ಮಂತ್ರಿ ಆಗದೇ ಹೋಗಿದ್ದರೆ ನಾನು ಇವತ್ತು ಎರಡನೇ ಬಾರಿ ಮುಖ್ಯಮಂತ್ರಿ ಆಗಲು ಸಾಧ್ಯವಿರಲಿಲ್ಲ. ಇದೇ ಕೆಲವರಿಗೆ ಹೊಟ್ಟೆಯುರಿ ಎಂದು ತಮ್ಮ ಮೇಲೆ ಆರೋಪಿಸಿರುವವರಿಗೆ ಟೀಕಿಸಿದರು. ಮೈಸೂರು, ಚಾಮರಾಜನಗರ ಜಿಲ್ಲೆಯ ಬಹುತೇಕ ಕಾಂಗ್ರೆಸ್ ಮುಖಂಡರು ರಾಚಯ್ಯನವರ ಪ್ರಾಡಕ್ಟ್ ಗಳು. ನಾನೂ ರಾಚಯ್ಯನವರ ಪ್ರಾಡಕ್ಟು ಎಂದರು.

ನಮಗೆ ತಂಗಳು ಇರ್ತಿತ್ತು. ಇಡ್ಲಿ, ದೋಸೆ ಇರ್ತಿಲಿಲ್ಲ ನಮಗೆ ಮನೆಯಲ್ಲಿ ತಂಗಳು ಇರ್ತಿತ್ತೇ ಹೊರತು, ಇಡ್ಲಿ, ದೋಸೆ, ಉಪ್ಪಿಟ್ಟು ಏನೂ ಇರ್ತಾ ಇರ್ಲಿಲ್ಲ. ರಾತ್ರಿ ಉಳಿದ ಮುದ್ದೆಗೆ ಮಜ್ಜಿಗೆ ಬೆರೆಸಿ ತಂಗಳು ತಿಂತಾ ಇದ್ವಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆ ದಿನಗಳನ್ನು ಸ್ಮರಿಸಿದರು. ರಾಯಚ್ಯನವರ ಸ್ಮಾರಕ ಉದ್ಘಾಟನಾ ಭಾಷಣ ಶುರು ಮಾಡುವ ವೇಳೆಗೆ ಸಂಜೆ 4 ಗಂಟೆ ಆಗಿತ್ತು. ಊಟದ ಸಮಯ ತಡವಾದದ್ದನ್ನು ಪ್ರಸ್ತಾಪಿಸಿ ಕ್ಷಮೆ ಕೋರಿ ಭಾಷಣ ಆರಂಭಿಸಿದ ಮುಖ್ಯಮಂತ್ರಿಗಳು ಮೇಲಿನ ಪ್ರಸಂಗ ನೆನಪಿಸಿಕೊಂಡರು. ರಾಚಯ್ಯ ಅವರ ಮನೆಯಲ್ಲೂ ಇಡ್ಲಿ ದೋಸೆ ಇರ್ತಿಲಿಲ್ಲ ಅಂತ ಕಾಣ್ತದೆ. ಅವರೂ ನನ್ನಂಗೆ ತಂಗಳು ತಿಂದು ಗಟ್ಟಿಯಾದರು ಎಂದರು.

ರಾಚಯ್ಯನವರು ನಡೆದಂತ ದಾರಿಯಲ್ಲೇ ನಡೆಯಪ್ಪಾ ಎಂದು ಅವರ ಪುತ್ರ ಶಾಸಕ ಕೃಷ್ಣಮೂರ್ತಿ ಅವರಿಗೆ ಇದೇ ಸಂದರ್ಭದಲ್ಲಿ ಸಿಎಂ ಕಿವಿ ಮಾತು ಹೇಳಿ, ಸದಾ ಬಡವರ ಪರವಾಗಿ ಇರಬೇಕು. ಯಾರನ್ನೂ ದ್ವೇಷಿಸಬಾರದು ಎಂದರು. ಇವತ್ತು ನಾವೆಲ್ಲಾ ಶಾಸಕರಾಗಿರುವುದು, ಮಂತ್ರಿಗಳಾಗಿರುವುದು, ಮುಖ್ಯಮಂತ್ರಿ ಗಳಾಗಿರುವುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಿಂದ. ರಾಚಯ್ಯನವರು ಸಂವಿಧಾನದ ಮಾರ್ಗದಲ್ಲಿ ನಡೆದರು. ಇವರು ಇವತ್ತಿನ ಯುವ ಪೀಳಿಗೆಗೂ ಮಾದರಿ ಎಂದರು.

ರಾಚಯ್ಯ ಸ್ಮಾರಕದಲ್ಲಿ IAS-IPS ತರಬೇತಿ ಕೇಂದ್ರ ಸ್ಥಾಪಿಸಲು ಸರ್ಕಾರದ ನೆರವನ್ನು ಶಾಸಕ ಕೃಷ್ಣಮೂರ್ತಿ ಅವರು ಕೇಳಿದ್ದಾರೆ. ಈ ಬೇಡಿಕೆ ಬಗ್ಗೆ ಪರಿಶೀಲಿಸಲಾಗುವುದು ಎಂದರು. ಚಾಮರಾಜನಗರ ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಲೂರು ಗ್ರಾಮದಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ, ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್, ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ, ಕಾನೂನು ಸಚಿವ ಎಚ್.ಕೆ.ಪಾಟೀಲ್, ರಾಚಪ್ಪ ಅವರ ಪತ್ನಿ ಗೌರಮ್ಮ, ಸಂಸದರಾದ ಸುನಿಲ್ ಬೋಸ್, ಶಾಸಕರುಗಳಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ತಿಮ್ಮಯ್ಯ ಸೇರಿ ಹಲವು ಮುಖಂಡರು ಉಪಸ್ಥಿತರಿದ್ದರು.

# ಜಿ.ವಿ.ಪಿ.ಪಿ ಕಾಲೇಜ್‌ಗೆ ಸೌಲಭ್ಯ

## ನೇಮಿರಾಜ್‌ನಾಯ್ಕ್ ಭರವಸೆ। ಕಲಾವೈಭವಕ್ಕೆ ಚಾಲನೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಇಲ್ಲಿಯ ಗಂಗಾವತಿ ವೆಂಕಟರಮಣ ಪದ್ಮಾವತಿ ಪಂಚರತ್ನಮ್ಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಗೆ, ಅವಶ್ಯ ಇರುವ ಸೌಲಭ್ಯಗಳನ್ನೊದಗಿಸುವೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಭರವಸೆ ನೀಡಿದರು.

ಪಟ್ಟಣದ ಜಿ.ವಿ.ಪಿ.ಪಿ.ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಹಮ್ಮಿಕೊಂಡಿದ್ದ, 2024ರ ಕಲಾವೈಭವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸರ್ಕಾರಿ ಶಾಲಾ ಮತ್ತು ಕಾಲೇಜ್‌ಗಳಲ್ಲಿ ನಮ್ಮ ಸುತ್ತಮುತ್ತಲಿನ ರೈತರ, ಬಡ ಕೂಲಿ ಕಾರ್ಮಿಕರ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಬಹುತೇಕ ನಾವು ನೀರಾವರಿ ಸೇರಿದಂತೆ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದ್ದು, ಒಟ್ಟಾರೆ 35ಕೋಟಿ ರೂ.ಗಳನ್ನು ಈಗಾಗಲೇ ಕ್ಷೇತ್ರದ ಎಲ್ಲಾ ಶಾಲೆಗಳಿಗೆ ಕ್ರೀಡಾ ಸಾಮಾಗ್ರಿಗಳನ್ನು ನೀಡುವ ಜೊತೆಗೆ ಇತರೆ ಚಟುವಟಿಕೆಗಳಿಗೆ ನೀಡಲಾಗುತ್ತಿದೆ ಎಂದರು. ಈ ಪ್ರಥಮ ದರ್ಜೆ ಕಾಲೇಜ್‌ಗೆ ವಿಜನಯನಗರ ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಸೌಲಭ್ಯಗಳನ್ನು ಹೊದಗಿಸುವ ಹೊಣೆ ನಮ್ಮದಾಗಿದೆ. ಕಲೆ ಮತ್ತು ಸಂಸ್ಕೃತಿ ಎನ್ನುವುದು ಭಾರತ ದೇಶದಲ್ಲೇ ನಮ್ಮ ಕರ್ನಾಟಕ ಮೊದಲ ಸಾಲಿನಲ್ಲಿದೆ. ಕಲಾ ವೈಭವದಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಯಶಸ್ವಿಯಾಗಲಿ ಎಂದರು.

ಪ್ರಾಂಶುಪಾಲರಾದ ಕೆ.ವೆಂಕಟೇಶರವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪನ್ಯಸಕರಾದ ಪಿ.ರಾಜಲಿಂಗಪ್ಪ ಪ್ರಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ, ಮುಖಂಡರಾದ ಮೃತ್ಯುಂಜಯ ಬದಾಮಿ, ಕನ್ನಿಹಳ್ಳಿ ಚಂದ್ರಶೇಖರ್, ಜೆ.ಎಂ.ಜಗದೀಶ, ಬಡಿಗೇರ್ ಸಿದ್ದರಾಜು, ಬಡಿಗೇರ್ ಬಸವರಾಜ್, ಬ್ಯಾಟಿ ನಾಗರಾಜ್ ಸೇರಿದಂತೆ ಉಪನ್ಯಾಸಕರು ಇದ್ದರು.

## ಬಿ.ಮಲ್ಲಮ್ಮ ನಿಧನ



**ಹಗರಿಬೊಮ್ಮನಹಳ್ಳಿ :** ತಾಲೂಕಿನ ಬಾಚಿಗೊಂಡನಹಳ್ಳಿಯ ಬಿ.ಮಲ್ಲಮ್ಮ(76) ಶುಕ್ರವಾರ ನಿಧನರಾದರು. ಮಲ್ಲಮ್ಮ ತನ್ನ ಕಣ್ಣುಗಳನ್ನು ದಾನಮಾಡಿ ತಮ್ಮ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಮೃತರಿಗೆ ಓರ್ವ ಪುತ್ರ ಇದ್ದಾರೆ. ಸ್ವಗ್ರಾಮದಲ್ಲಿ ಧಾರ್ಮಿಕ ವಿಧಿವಿದಾನಗಳಂತೆ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.




# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

https://epaper.hampitimes.com ಹಂಪಿ ಟೈಮ್ಸ್ ಮಾರ್ಗದರ್ಶಿ.

## ವ್ಯವಹಾರ ಅಧ್ಯಯನ ಅಧ್ಯಾಯ – 16. ಬ್ಯಾಂಕ್ ವ್ಯವಹಾರಗಳು

**1. 'ಬ್ಯಾಂಕುಗಳ ಬ್ಯಾಂಕ್' ಎಂದು ಕರೆಯಲ್ಪಡುವ ಬ್ಯಾಂಕ್ ಯಾವುದು?**
ಉತ್ತರ: ಭಾರತೀಯ ರಿಸರ್ವ್ ಬ್ಯಾಂಕ್

**2. 'ಕಿಸಾನ್ ವಿಕಾಸ ಪತ್ರ'ಗಳನ್ನು ನೀಡುವ ಸಂಸ್ಥೆ ಯಾವುದು?**
ಉತ್ತರ: ಅಂಚೆ ಕಛೇರಿಗಳು

**3.'ರಾಷ್ಟೀಯ ಉಳಿತಾಯ ಪತ್ರ' ಗಳನ್ನು ನೀಡುವ ಸಂಸ್ಥೆ ಯಾವುದು?(ಜೂನ್ 2023)**
ಉತ್ತರ: ಅಂಚೆ ಕಛೇರಿಗಳು

**4) ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ ಯಾವುದು? (ಜೂನ್ 2022)**
ಉತ್ತರ: ಚಾಲ್ತಿ ಖಾತೆ

**5. ಭವಿಷ್ಯದ ಅವಶ್ಯಕತೆಗಲಾದ ಮಕ್ಕಳ ವಿವಾಹ, ಆಸ್ತಿ ಖರೀದಿ ಮುಂತಾದವುಗಳನ್ನು ಕೊಳ್ಳಲು ತೆರೆಯಬಹುದಾದ ಖಾತೆಯಾವುದು?**
ಉತ್ತರ: ಆವರ್ತ ಠೇವಣಿ ಖಾತೆ

**5. ಬ್ಯಾಂಕುಗಳು ತಾವು ನೀಡುವ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುವ ಖಾತೆ ಯಾವುದು?**
ಉತ್ತರ: ಚಾಲ್ತಿ ಖಾತೆ

**6. ಜನರು ತಮ್ಮ ಒಡವೆ ಮತ್ತು ಬೆಲೆಬಾಳುವ ವಸ್ತುಗಳನ್ನು ಸಂರಕ್ಷಿಸಿಡಲು ಬ್ಯಾಂಕುಗಳಿಂದ ಪಡೆಯುವ ಸೇವೆ ಯಾವುದು?**
ಉತ್ತರ: ಭದ್ರತಾ ಕಪಾಟು ಸೇವೆ (ಜೂನ 2023)

**7. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು ಯಾವುವು? (ಸೆಪ್ಟಂಬರ್2020, 2022)**
ಉತ್ತರ: 1) ಉಳಿತಾಯ ಖಾತೆ 2) ಚಾಲ್ತಿ ಖಾತೆ
3) ಆವರ್ತ ಠೇವಣಿ ಖಾತೆ 4) ನಿಶ್ಚಿತ ಠೇವಣಿ ಖಾತೆ

**8. ಬ್ಯಾಂಕಿನ ಕಾರ್ಯಗಳು /ಅನುಕೂಲಗಳು/ ಗುಣಲಕ್ಷಣಗಳು/ ಸೇವೆಗಳಾವುವು? 3 ಅಂಕ (ಜೂನ್,ಸೆ..2022, ಎಪ್ರಿಲ್, 2023)**
ಉತ್ತರ: 1.ಠೇವಣಿಗಳನ್ನು ಅಂಗೀಕರಿಸುತ್ತದೆ
2.ಸಾಲಗಳನ್ನು ಕೊಡುವುದು
3.ಹಣವನ್ನು ವರ್ಗಾಯಿಸುವುದು
4.ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುತ್ತದೆ
5. ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುತ್ತದೆ
6. ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುತ್ತದೆ
7. ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುತ್ತದೆ.
8. ಹುಂಡಿಗಳನ್ನು ಸೋಡಿ ಮಾಡುತ್ತದೆ
9. ಖರ್ಚು ಕಾರ್ಡು ಮತ್ತು ಜಮಾ ಕಾರ್ಡುಗಳನ್ನು ನೀಡುತ್ತದೆ
9. ಬ್ಯಾಕ್ ಹಣದ ಭದ್ರತೆಯನ್ನು ಕಾಪಾಡುತ್ತದೆ
10. ಇ–ಬ್ಯಾಂಕಿಗ್ ಸೇವೆಗಳನ್ನು ಒದಗಿಸುತ್ತದೆ

**9. ಅಂಚೆ ಕಛೇರಿಗಳು ಒದಗಿಸುವ ಬ್ಯಾಂಕಿಂಗ್ ಸೇವೆಗಳಾವುವು? (ಜೂನ್, 2020) (ಎಪ್ರಿಲ್2024) 3 ಅಂಕ**
ಉತ್ತರ: 1. ರಾಷ್ಟೀಯ ಉಳಿತಾಯ ಪತ್ರ ಗಳನ್ನು ನೀಡುತ್ತದೆ
2. ಹಣ ವರ್ಗಾವಣೆ ಮಾಡುತ್ತದೆ
3. ಅಂಚೆ ಉಳಿತಾಯ ಖಾತೆಗಳು
4. ಕಿಸಾನ್ ವಿಕಾಸ್ ಪತ್ರಗಳನ್ನು ನೀಡುತ್ತದೆ
5. ಅಂಚೆ ವಿಮೆ ಸೌಲಭ್ಯ ನೀಡುತ್ತದೆ
6. ಆವರ್ತ& ನಿಶ್ಚಿತ ಠೇವಣಿಗಳ ಸೌಲಭ್ಯಗಳು
7. ನಿವೃತ್ತಿ ವೇತನ ಸೌಲಭ್ಯ ನೀಡುತ್ತದೆ

**10. ಬ್ಯಾಂಕು ಖಾತೆಯನ್ನು ತೆರೆಯಲು ಅನುಸರಿಸುವ ಹಂತಗಳನ್ನು ಯಾವುವು. (ಜೂನ್2 023) 3 ಅಂಕ**
ಉತ್ತರ: 1. ಬ್ಯಾಂಕ್ ಖಾತೆಯನ್ನು ನಿರ್ಧರಿಸುವುದು.
2. ಅಧಿಕಾರಿಯನ್ನು ಸಂಪರ್ಕಿಸುವುದು.
3. ಪ್ರಸ್ತಾವನೆ ಅರ್ಜಿ ತುಂಬುವುದು.
4. ಪರಿಚಿತರ ಉಲ್ಲೇಖನವನ್ನು ಕೊಡುವುದು.
5. ಖಾತೆ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
6. ಅಧಿಕಾರಿಯ ಒಪ್ಪಿಗೆ ಪಡೆಯುವುದು.
7. ಪ್ರಾರಂಭಿಕ ಠೇವಣಿ ಕಟ್ಟುವುದು.

**11.ಆವರ್ತ ಠೇವಣಿ ಖಾತೆಯು ನಿಶ್ಚಿತ ಠೇವಣಿ ಖಾತೆಗಿಂತ ಹೇಗೆ ಭಿನ್ನವಾಗಿದೆ? (ಎಪ್ರಿಲ್2023) 3 ಅಂಕ**
ಉತ್ತರ: ಆವರ್ತ ಠೇವಣಿ ಖಾತೆ
1. ಭವಿಷ್ಯದಲ್ಲಿ ಹಣ ಹಿಂಪಡೆಯಲು ಖಾತೆ ತೆರೆಯಲಾಗುತ್ತದೆ.
2. ಪ್ರತಿ ತಿಂಗಳು ಠೇವಣಿಗಳನ್ನು ಜಮಾ ಮಾಡುತ್ತಾರೆ.
3. ಭವಿಷ್ಯದಲ್ಲಿ ಮಕ್ಕಳ ವಿವಾಹ, ವಸ್ತುಗಳ ಖರೀದಿ, ನೆಲ, ಕಾರು ಕೊಳ್ಳಲು ಸಾಧ್ಯ.
4. ಒಂದು ಅವಧಿಯ ನಂತರ ಬಡ್ಡಿಯನ್ನು ಸೇರಿಸಿ ಹಣವನ್ನು ಬ್ಯಾಂಕು ಹಿಂದಿರುಗಿಸುತ್ತದೆ ನಿಶ್ಚಿತ ಠೇವಣಿ ಖಾತೆ
1. ಒಂದು ನಿಗಧಿತ ಅವಧಿಗೆ ಠೇವಣಿ ಇಡಲಾಗುತ್ತದೆ.
2. ನಿಶ್ಚಿತ ಅವಧಿಯ ನಂತರ ಬಡ್ಡಿಯನ್ನು ಸೇರಿಸಿ ಹಣವನ್ನು ಹಿಂದಿರುಗಿಸಲಾಗುತ್ತದೆ.
3. ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ.
4. ಬಡ್ಡಿದರ ಹೆಚ್ಚಾಗಿರುತ್ತದೆ.

**12. ಉಳಿತಾಯಯ ಖಾತೆಯು ಚಾಲ್ತಿಖಾತೆಗಿಂತ ಹೇಗೆ ಭಿನ್ನವಾಗಿದೆ?**
ಉತ್ತರ: **ಉಳಿತಾಯ ಖಾತೆ**
1. ವೇತನ ಪಡೆಯುವವರು, ನಿಯಮಿತ ಆದಾಯವಿರುವವರಿಗೆ ಸೂಕ್ತ.
2. ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರಿಗೆ ಅವಕಾಶವಿದೆ.
3. ಹಣ ಉಳಿತಾಯ ಮಾಡಲು ಸಹಾಯಕ.
4. ಚೆಕ್ಕು ಮೂಲಕ ಹಣ ಹಿಂಪಡೆಯಬಹುದು.

**ಚಾಲ್ತಿ ಖಾತೆ**
1. ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳಿಗೆ ಅನುಕೂಲ.
2. ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ವಹಿವಾಟು ನಡೆಸಬಹುದು.
3. ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ.
4. ಸೇವಾ ಶುಲ್ಕ ವಸೂಲು ಮಾಡುತ್ತವೆ.

www.hampitimes.com/epaper.hampitimes.com

ನಿನ್ನ ಏಳ್ಗೆಗೆ ನೀನೇ ಶಿಲ್ಪಿ

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ.

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055